# ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 158 RNI Number : KNKAN/25/A2770 16-06-2026 Tuesday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :158 ರಾಯಚೂರು 16-06-2026 ಮಂಗಳವಾರ ಪುಟ 04 ಬೆಲೆ ರೂ.2/- ಮೊ:8660146563


## ಜಮೀರ್ ಅಹಮದ್ ಖಾನ್‌ಗೆ ಡಿಸಿಎಂ ಸ್ಥಾನ ನೀಡುವಂತೆ ಆಗ್ರಹಿಸಿ ಬೆಂಬಲಿಗರಿಂದ ವಿಧಾನಸೌಧ ಚಲೋ

ಬೆಂಗಳೂರು, ಜೂ. 15-

ಮಾಜಿ ಸಚಿವ ಜಮೀರ್ ಅಹಮದ್ ಖಾನ್ ಅವರನ್ನು ಉಪ ಮುಖ್ಯಮಂತ್ರಿ ಮಾಡಬೇಕೆಂದು ಆಗ್ರಹಿಸಿ ಬೆಂಬಲಿಗರು ಇಂದು ವಿಧಾನಸೌಧ ಚಲೋ ನಡೆಸಿದ್ದಾರೆ. ಮಾಜಿ ಕಾರ್ಪೊರೇಟರ್‌ಗಳು ಹಾಗೂ ಕೆಲ ಮುಖಂಡರು ಜಮೀರ್ ಅವರಿಗೆ ಸಚಿವ ಸ್ಥಾನ ನೀಡಬೇಕು ಮತ್ತು ಉಪ ಮುಖ್ಯಮಂತ್ರಿ ಮಾಡಬೇಕೆಂದು ಒತ್ತಾಯಿಸಿ ಪಾದರಾಯನಪುರದಿಂದ ವಿಧಾನಸೌಧದ ವರೆಗೂ ಪ್ರತಿಭಟನೆಯ ಜಾಥಾ ನಡೆಸಿದ್ದಾರೆ.



ಮೊದಲ ಹಂತದ ಸಂಪುಟದ ರಚನೆಯಲ್ಲಿ ಜಮೀರ್ ಅವರಿಗೆ ಅವಕಾಶ ಸಿಕ್ಕಿಲ್ಲ, ಈ ವಿಚಾರವಾಗಿ ಹಿರಿಯ ನಾಯಕರನ್ನು ಭೇಟಿ ಮಾಡಿ ಜಮೀರ್ ಅವರು ತಮ ಅಹವಾಲು ಹೇಳಿಕೊಂಡಿದ್ದಾರೆ. ಮತ್ತೊಂದೆಡೆ ಜಮೀರ್ ಅವರ ಬೆಂಬಲಿಗರು ನಿರಂತರವಾಗಿ ಪ್ರತಿಭಟನೆ ನಡೆಸುತ್ತಿರುವುದು ಕಾಂಗ್ರೆಸ್ಸಿ ಗರ ಕೆಂಗಣ್ಣಿಗೆ ಗುರಿಯಾಗಿದೆ.

ಈ ಮೊದಲು ಸಚಿವರಾಗಿದ್ದ ಶಿವರಾಜ ತಂಗಡಗಿ ಅವರನ್ನು ನೂತನ ಸರ್ಕಾರದಲ್ಲಿ ಸಂಪುಟದಿಂದ ಹೊರ ಇಡಲಾಗಿದೆ. ಅವರ ಬೆಂಬಲಿಗರು ಪ್ರತಿಭಟಿಸಲು ಮುಂದಾದಾಗ ಶಿವರಾಜ ತಂಗಡಗಿ ಸಮಾಧಾನ ಪಡಿಸಿದ್ದು, ಪ್ರತಿಭಟನೆ ಮಾಡಬೇಡಿ, ಪೂಜೆ, ಪ್ರಾರ್ಥನೆಗಳ ಮೂಲಕ ಹೈಕಮಾಂಡ್ ಮನ ಸೆಳೆಯುವ ಮೂಲಕ ಪ್ರಯತ್ನಮಾಡಿ ಎಂದು ಸಲಹೆ ನೀಡಿದ್ದರು. ಇದೇ ರೀತಿ ಹಲವು ಸಚಿವರು ತಮ ಬೆಂಬಲಿಗರನ್ನು ನಿಯಂತ್ರಿಸಿ ಕಾಂಗ್ರೆಸ್ ವಿರುದ್ಧ ಪ್ರತಿಭಟನೆ ಮಾಡದಂತೆ ತಡೆದಿದ್ದಾರೆ. ಆದರೆ ಜಮೀರ್ ಅವರ ಬೆಂಬಲಿಗರು ಯಾವುದಕ್ಕೂ ಜಗ್ಗದೇ ಪ್ರತಿಭಟನೆ ನಡೆಸುತ್ತಿದ್ದಾರೆ.

ಈ ಮೊದಲು ದಾವಣಗೆರೆ ದಕ್ಷಿಣ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಪರವಾಗಿ ಕೆಲಸ ಮಾಡಿಲ್ಲ ಎಂದು ಆರೋಪಿಸಿ, ಕಾಂಗ್ರೆಸ್ ಪಕ್ಷ ಆಗಿನ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಜೀರ್ ಅಹಮದ್ ಅವರನ್ನು ಅಧಿಕಾರದಿಂದ ವಜಾಗೊಳಿಸಿತ್ತು. ಕಾಂಗ್ರೆಸ್ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷರಾದ ಅಬ್ದುಲ್ ಜಬ್ಬಾರ್ ತಮ ಸ್ಥಾನಕ್ಕೆ ರಾಜೀನಾಮೆ ನೀಡುವ ಪರಿಸ್ಥಿತಿ ಎದುರಾಗಿತ್ತು.

4ನೇ ಪುಟ.....

## ಭ್ರಷ್ಟಾಚಾರ ನಿಯಂತ್ರಣಕ್ಕೆ ಶೀಘ್ರದಲ್ಲೇ ಖಾಯಂ ಪರಿಹಾರ : ಗೃಹ ಸಚಿವ ಪ್ರಿಯಾಂಕ್ ಖರ್ಗೆ

ಬೆಂಗಳೂರು,ಜೂ.15-

ನಾಗರಿಕರಿಗೆ ತೊಂದರೆ ನೀಡಿ, ಲಂಚ ಕೇಳುವ ಭ್ರಷ್ಟಾಚಾರದ ವ್ಯವಸ್ಥೆಗೆ ಮೇಲಟ್ಟದಿಂದಲೂ ಕಡಿವಾಣ ಹಾಕಲು ಖಾಯಂ ವ್ಯವಸ್ಥೆಯನ್ನು ಶೀಘ್ರವೇ ರೂಪಿಸಲಾಗುವುದು ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ಪೊಲೀಸರು ಜೈಪುರದಲ್ಲಿ ಲಂಚ ಕೇಳಿ ಸಿಕ್ಕಿಬಿದ್ದಿರುವುದು ಒಳ್ಳೆಯ ಬೆಳವಣಿಗೆಯಂತೂ ಅಲ್ಲ, ಇದರಿಂದ ರಾಜ್ಯದ ಜನತೆಗೆ ಧಕ್ಕೆಯುಂಟಾಗಿದೆ. ರಕ್ಷಕರೇ



ಭಾಗಿಯಾಗಿದ್ದಾರೆಯೇ ಎಂಬುದನ್ನು ಪರಿಶೀಲಿಸಲು ಆದೇಶಿಸಲಾಗಿದೆ ಎಂದರು.ವ್ಯವಸ್ಥೆ ತುಕ್ಕು ಹಿಡಿದಿದೆ. ಅದನ್ನು ಸರಿಪಡಿಸಲು ಸ್ವಲ್ಪ ಸಮಯಬೇಕು. ಭ್ರಷ್ಟಾಚಾರವನ್ನು ಬೇರು ಮಟ್ಟದಿಂದ ಕಿತ್ತೊಗೆಯಬೇಕಿದೆ. ಇದನ್ನು ಕೆಳ ಹಂತದಲ್ಲಷ್ಟೇ ಅಲ್ಲ ಮೇಲಟ್ಟದಿಂದಲೂ ಸರಿಪಡಿಸಬೇಕಿದೆ. ಯಾರೇ ಹಣ ಕೇಳಿದರೂ ನಮಗೆ ದೂರು ನೀಡಿ ಎಂದು ಮುಖ್ಯಮಂತ್ರಿಯವರು ಹೇಳಿದ್ದಾರೆ.

ಪೊಲೀಸ್ ಠಾಣೆಗಳಲ್ಲಿ ಜನರಿಗೆ ತೊಂದರೆ ಕೊಡುವುದು, ಅವ್ಯವಹಾರ ಮಾಡುವುದು, ಲಂಚ ಕೇಳುವುದು, ಕರ್ತವ್ಯ ನಿರ್ವಹಿಸುವಾಗ ಭ್ರಷ್ಟಾಚಾರ ನಡೆಸುವುದು ಕಂಡು ಬಂದರೆ, ಜನರು ನೇರವಾಗಿ ನಮಗೆ ದೂರು ನೀಡುವ ವ್ಯವಸ್ಥೆಯನ್ನು ಗೃಹ ಇಲಾಖೆಯಲ್ಲಿ ಜಾರಿಗೊಳಿಸಲಾಗುವುದು ಎಂದು ಹೇಳಿದರು.

ನನ್ನ ಇಲಾಖೆಯ ಆಗೂ-ಹೋಗುಗಳ ಹೊಣೆಗಾರಿಕೆಯನ್ನು ತೆಗೆದುಕೊಳ್ಳಲು ನಾನು ಸಿದ್ಧನಿದ್ದೇನೆ. ಅದೇ ರೀತಿ ಬಿಜೆಪಿ ಸರ್ಕಾರದಲ್ಲಿ ಗೃಹ ಸಚಿವರಾಗಿದ್ದ ಆರ್.ಅಶೋಕ್, ಬಸವರಾಜ ಬೊಮಾಯಿ, ಅರಗ ಜ್ಞಾನೇಂದ್ರ ಅವರ ಕಾಲದಲ್ಲಿ ಪೊಲೀಸ್ ಠಾಣೆಗಳಲ್ಲಿ ಭ್ರಷ್ಟಾಚಾರ ಇರಲಿಲ್ಲವೇ? ಈಗ ನಮ ಅಧಿಕಾರಿಗಳು ತಪ್ಪು ಮಾಡಿದರೆ, ನಾನು ಕ್ರಮ ಕೈಗೊಳ್ಳುವುದಾಗಿ ಧೈರ್ಯವಾಗಿ ಹೇಳುತ್ತಿದ್ದೇನೆ. ಇದೇ ರೀತಿ ಅಶೋಕ್ ಅವರು ಒಂದೇ

4ನೇ ಪುಟ.....

### ಜೋಳ ಖರೀದಿ ಮಾಡಿದ ರೈತರ ಖಾತೆಗೆ ಹಣ ಜಮಾ ಮಾಡಿ.ರಸ್ತೆ ತಡೆದು ರೈತ ಸಂಘಟನೆ ಪ್ರತಿಭಟನೆ

## ಖರೀದಿ ಕೇಂದ್ರ ಯಿಂದ ಖರೀದಿ ಮಾಡಿದ ರೈತರ ಖಾತೆ ಕೂಡಲೇ ಹಣ ಜಮಾ ಮಾಡಿ-ಬಸವರಾಜ ಹಂಚಿನಾಳ್





ಸಿಂಧನೂರು,ಜೂ.15-

ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಗ್ರಾಮೀಣ ಪ್ರದೇಶದ ರೈತ ಬಾಂಧವರು ಬೆಳೆದ ಜೋಳದ ಬೆಳೆಗೆ ಅವರ ಖಾತೆಗೆ ಜೋಳ ಮಾರಾಟದ ಮೊತ್ತವನ್ನು ಶೀಘ್ರದಲ್ಲಿ ಜಮಾ ಮಾಡುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಸಮಿತಿ ಇಂದು ಪೋತ್ನಾಳ್ ಗ್ರಾಮದಲ್ಲಿ ಹೆದ್ದಾರಿ ರಸ್ತೆ ತಡೆದು ಪ್ರತಿಭಟನೆ ನಡೆಸಿದರು

ನಂತರ ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ಬಸವರಾಜ ಹಂಚಿನಾಳ ಜಿಲ್ಲಾಧ್ಯಕ್ಷರು ಅವರು

ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ರೈತ ಬಾಂಧವರು ತಮ್ಮ ಜಮೀನುಗಳಲ್ಲಿ ಪ್ರಸಕ್ತ ಸಾಲಿನಲ್ಲಿ ಜೋಳದ ಬೆಳೆಯನ್ನು ಬೆಳೆದಿದ್ದು, ಸದರಿ ರೈತರು ತಮ್ಮ ಜೋಳದ ಬೆಳೆಯನ್ನು ಸಿಂಧನೂರು ತಾಲೂಕಿನಾದ್ಯಂತರ ಬರುವ ಖರೀದಿ ಕೇಂದ್ರಗಳಿಗೆ ಜೋಳವನ್ನು ಈಗಾಗಲೇ ಮಾರಾಟ ಮಾಡಿದ್ದು ತಮಗೆ ಮತ್ತು ತಮ್ಮ ಸರ್ಕಾರಕ್ಕೆ ಗೊತ್ತಿರುವ ವಿಷಯವಾಗಿದೆ. ಈಗ ರೈತರು ತಮ್ಮ ಜೋಳವನ್ನು ಖರೀದಿ ಕೇಂದ್ರಗಳಿಗೆ ಮಾರಾಟ ಮಾಡಿ ಸುಮಾರು 04 ತಿಂಗಳುಗಳು ಕಳೆದು ಹೋಗಿದ್ದು ಇಲ್ಲಿಯವರೆಗೆ ರೈತರ ಖಾತೆಗೆ ಜೋಳದ ಹಣವು ಜಮಾ ಆಗಿರುವುದಿಲ್ಲ ಎಂದು ಆಗ್ರಹಿಸಿದರು

4ನೇ ಪುಟ.....

## ಸ್ಲಂ ಕ್ರಿಯಾ ವೇದಿಕೆ ಅಧ್ಯಕ್ಷರಾಗಿ ಜನಾರ್ಧನ್ ಹಳ್ಳಿಬೆಂಚಿ ಹಾಗೂ ರಾಜ್ಯ ಸಮಿತಿ ಸದಸ್ಯರಾಗಿ ಎಸ್. ನಾಗರಾಜ್ ಅವಿರೋಧ ಆಯ್ಕೆ

ರಾಯಚೂರು,ಜೂ.15-

ನಗರದ ಕನ್ನಡ ಭವನದಲ್ಲಿ ನಡೆದ ನಮ್ಮ ಸ್ಲಂ ಜನಾಂದೋಲನ - ಕರ್ನಾಟಕ ರಾಯಚೂರು ಸ್ಲಂ ನಿವಾಸಿಗಳ ಕ್ರಿಯಾ ವೇದಿಕೆ ವತಿಯಿಂದ ಮುಂದಿನ ಮೂರು ವರ್ಷಗಳ ವರೆಗೆ ನೂತನ ಪಧಾಧಿಕಾರಿಗಳನ್ನು ಆಯ್ಕೆ ಮಾಡಿ ಪದಗ್ರಹಣ ಕಾರ್ಯಕ್ರಮವನ್ನು ಹಂಬಿ ಕೊಳ್ಳಲಾಯಿತು. ಈ ಸಂಧರ್ಭದಲ್ಲಿ ನಮ್ಮ ಸ್ಲಂ ಜನಾಂದೋಲನ - ಕರ್ನಾಟಕ ರಾಜ್ಯ ಸಂಚಾಲಕರಾದ ಎ. ನರಸಿಂಹ ಮೂರ್ತಿ ಸರ್ ಅವರ ಅಧ್ಯಕ್ಷತೆಯಲ್ಲಿ ಹಾಗೂ ನಮ್ಮ ರಾಯಚೂರು ಸ್ಲಂ ನಿವಾಸಿಗಳ ಕ್ರಿಯಾ ವೇದಿಕೆಯ ಜಿಲ್ಲಾ ಸಮಿತಿ ಸದಸ್ಯರಗಳ ಸಮ್ಮುಖದಲ್ಲಿ ಆಯ್ಕೆ ಪಕ್ರಿಯೆ ಶುರು ಮಾಡಿದರು. ಮತ್ತು ಈ ಒಂದು ಜಿಲ್ಲಾ ಸಮಿತಿಗೆ ನೂತನವಾಗಿ 50 ಜನ ಸದಸ್ಯರನ್ನು ಜಿಲ್ಲಾ ಸಮಿತಿಗೆ ಆಯ್ಕೆ ಮಾಡಲಾಯಿತು. ಹಾಗೂ 15 ಜನ ಸದಸ್ಯರನ್ನು ಕಾರ್ಯಕಾರಿ ಸಮಿತಿ ಸದಸ್ಯರನ್ನಾಗಿ ಆಯ್ಕೆ ಮಾಡಲಾಯಿತು. ಇದರಲ್ಲಿ ಜನಾರ್ಧನ್ ಹಳ್ಳಿಬೆಂಚಿ ಅವರನ್ನು ರಾಯಚೂರು ಸ್ಲಂ ನಿವಾಸಿಗಳ ಕ್ರಿಯಾ ವೇದಿಕೆಗೆ ಜಿಲ್ಲಾಧ್ಯಕ್ಷರನ್ನಾಗಿ ಅವಿರೋಧವಾಗಿ ಮರು ಆಯ್ಕೆ ಮಾಡಲಾಯಿತು. ಹಾಗೂ ಎಸ್. ನಾಗರಾಜ್ ಅವರನ್ನು ಸ್ಲಂ ಜನಾಂದೋಲನ ಕರ್ನಾಟಕ



ರಾಜ್ಯ ಸಮಿತಿಗೆ ಜನಪ್ರತಿನಿಧಿಯಾಗಿ ಆಯ್ಕೆ ಮಾಡಲಾಯಿತು. ಮತ್ತು ಜಿಲ್ಲಾ ಉಪಾಧ್ಯಕ್ಷರಾಗಿ ಮಹೇಶ್, ನೂರಜಾನ್ ಹಾಗೂ ಕಾರ್ಯದರ್ಶಿಯಾಗಿ ಬಸವರಾಜ್ ಹೊಸೂರು, ಸಂಘಟನೆ ಕಾರ್ಯದರ್ಶಿಯಾಗಿ ಶರಣ ಬಸವ (ರೆಡ್ಡಿ ) ಹಾಗೂ ಖಜಾಂಚಿಯಾಗಿ ರಾಜಶೇಖರ್ ಯಾಕ್ಲಾಸಪೂರ್ ಅವರನ್ನು ನೇಮಕ ಮಾಡಲಾಯಿತು. ಈ

4ನೇ ಪುಟ.....

### ಹಟ್ಟಿ ಚಿನ್ನದ ಗಣಿಯಲ್ಲಿ 3ನೇ ಹಂತದ ಹೋರಾಟ ಆರಂಭ

## ಕಾರ್ಮಿಕರ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅನಿರ್ದಿಷ್ಟಾವಧಿ ಧರಣಿ

ಹಟ್ಟಿ, ಜೂ.15-

ಕಾರ್ಮಿಕರ ಬಹುಕಾಲದ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವ ಬದಲು ಆಡಳಿತ ಮಂಡಳಿ ವಿಳಂಬ ನೀತಿ ಅನುಸರಿ ಸುತ್ತಿರುವುದನ್ನು ಖಂಡಿಸಿ ಹಟ್ಟಿ ಚಿನ್ನದ ಗಣಿ ಸಿಬ್ಬಂದಿ ಮತ್ತು ಕಾರ್ಮಿಕ ಸಂಘವು ತನ್ನ ಹೋರಾಟ ವನ್ನು ಮೂರನೇ ಹಂತಕ್ಕೆ ಕೊಂಡೊ ಯ್ದಿದ್ದು, ಸೋಮವಾರದಿಂದ ಕಂಪನಿಯ ಮುಖ್ಯ ಕಾರ್ಯಾಲ ಯದ ಮುಂದೆ ಕಪ್ಪು ಬಾವುಟ ಹಿಡಿದು ಅನಿರ್ದಿಷ್ಟಾವಧಿ ಪ್ರತಿಭ ಟನಾ ಧರಣಿ ಆರಂಭಿಸಿದೆ.




ಪ್ರತಿಭಟನಾ ಧರಣಿಯನ್ನು ಉದ್ದೇಶಿಸಿ ಮಾತನಾಡಿದ ಸಿಬ್ಬಂದಿ ಮತ್ತು ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಎಂ. ಶಫಿ, ಅನಾರೋಗ್ಯಪೀಡಿತ ಕಾರ್ಮಿಕರಿಗೆ ಮೆಡಿಕಲ್ ಅನ್‌ಫಿಟ್ ಯೋಜನೆ ಯನ್ನು ತಕ್ಷಣ ಜಾರಿಗೊಳಿಸುವುದು, ಹೊಸ ವೇತನ ಒಪ್ಪಂದವನ್ನು ಅನುಷ್ಠಾನಗೊಳಿಸುವುದು, ಸ್ಥಳೀಯ ವಿದ್ಯಾವಂತ ಯುವಕರಿಗೆ ಕ್ಯಾಸುವಲ್ ಉದ್ಯೋಗಾವಕಾಶ ಕಲ್ಪಿಸುವುದು ಹಾಗೂ ಕಾರ್ಮಿಕರನ್ನು ಶೋಷಣೆ ಮಾಡುತ್ತಿರುವ ಗುತ್ತಿಗೆ ಪದ್ಧತಿಯನ್ನು ರದ್ದುಪಡಿಸುವುದು ಸೇರಿದಂತೆ ಹಲವು ಪ್ರಮುಖ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಧರಣಿ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಇದಲ್ಲದೆ, ಬಾಕಿ ಇರುವ ಎಕ್ಸ್ ಗ್ರೇಷಿಯಾ, ಪಿಎಲ್‌ಐಬಿ (), ಬೋನಸ್, ಎಚ್‌ಆರ್‌ಎ () ಸೇರಿ ದಂತೆ ವಿವಿಧ ಆರ್ಥಿಕ ಸೌಲಭ್ಯ ಗಳನ್ನು ಕೂಡಲೇ ವಿತರಿಸುವಂತೆ ಸಂಘ ಒತ್ತಾಯಿಸಿದೆ. ಉತ್ಪಾದನೆ ಯಲ್ಲಿ ಮಹತ್ತರ ಕೊಡುಗೆ ನೀಡುತ್ತಿ ರುವ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಆಡಳಿತ ನಿರ್ಲಕ್ಷ್ಯ ತೋರುತ್ತಿರು ವುದು ಬೇಸರದ ಸಂಗತಿ ಎಂದು ಮುಖಂಡರು ಆರೋಪಿಸಿದರು.

ಹಟ್ಟಿ ಚಿನ್ನದ ಗಣಿ ಪ್ರದೇಶದಲ್ಲಿ ನಿರುದ್ಯೋಗ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಸ್ಥಳೀಯ ಯುವಕರಿಗೆ ಉದ್ಯೋಗಾ ವಕಾಶ ಕಲ್ಪಿಸುವ ಬದಲು ಹೊರ ಗುತ್ತಿಗೆ ವ್ಯವಸ್ಥೆಯನ್ನು ಉತ್ತೇಜಿಸಲಾ

4ನೇ ಪುಟ.....

## ರಸ್ತೆ ಬದಿ ನಿಂತಿದ್ದ ಲಾರಿಗೆ ಕಾರು ಢಿಕ್ಕಿ; ಉಪನ್ಯಾಸಕ ಮೃತ್ಯು, ನಾಲ್ವರಿಗೆ ಗಾಯ

ರಾಯಚೂರು,ಜೂ.15-

ರಸ್ತೆ ಬದಿ ನಿಂತಿದ್ದ ಲಾರಿಗೆ ಕಾರು ಢಿಕ್ಕಿ ಹೊಡೆದ ಪರಿಣಾಮ ವಿಶ್ರಾಂತ ಉಪನ್ಯಾಸಕರೊಬ್ಬರು ಸ್ಥಳದಲ್ಲಿಯೇ ಮೃತಪಟ್ಟಿದ್ದು, ನಾಲ್ವರು ಗಂಭೀರವಾಗಿ ಗಾಯಗೊಂಡ ಘಟನೆ ರಾಯಚೂರು ಗಡಿ ಭಾಗದ ನಾರಾಯಣಪೇಟೆ ಜಿಲ್ಲೆ ವ್ಯಾಪ್ತಿಯ ಕೃಷ್ಣ ಮಂಡಲದ ಗುಡೆಬಳ್ಳೂರು ಗ್ರಾಮದ ಟೈರ್ ರೋಡ್ ಬಳಿ ರವಿವಾರ ಸಂಜೆ ನಡೆದಿದೆ.

ಶೇಖರಪ್ಪ ಗೌಡ (70) ಮೃತ ಉಪನ್ಯಾಸಕ. ಅವರ ಪತ್ನಿ, ಇಬ್ಬರು ಮೊಮ್ಮಕ್ಕಳು ಸೇರಿ ಯಾದಗಿರಿ ಜಿಲ್ಲೆಯ ಸೈದಾಪುರ ಬಳಿಯ ಕಲಬೆಳಗುಂದಿ ದೇವಸ್ಥಾನಕ್ಕೆ ಭೇಟಿ ನೀಡಿ ದರ್ಶನ ಪಡೆದು ಕಾರಿನಲ್ಲಿ



ಮರಳುವಾಗ ಈ ದುರ್ಘಟನೆ ಸಂಭವಿಸಿದೆ.

ಘಟನೆಯಿಂದ ಚಾಲಕನಿಗೆ ಹಾಗೂ ಮೊಮ್ಮಕ್ಕಳಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಶೇಖರಪ್ಪ ಅವರ ಸೊಸೆ, ಪತ್ನಿಯ ಕೈಕಾಲುಗಳಿಗೆ ಗಂಭೀರ ಗಾಯಗಳಾಗಿವೆ. ಚಾಲಕನ ಪಕ್ಕದ ಸೀಟಿನಲ್ಲಿ ಕುಳಿತಿದ್ದ ಶೇಖರಪ್ಪ ಗೌಡ ಅವರು ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಾಯಗೊಂಡ ನಾಲ್ವರನ್ನು ಸ್ಥಳೀಯರು ಹಾಗೂ ಪೊಲೀಸರು ತಕ್ಷಣವೇ ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದು, ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂಬ

4ನೇ ಪುಟ.....

## ಹಿರಿಯರ ಶೋಷಣೆ ತಡೆಯಲು ಕಾನೂನು ಜಾಗೃತಿ ಅಗತ್ಯ - ಸಿದ್ಧರಾಮಪ್ಪ ಕಲ್ಯಾಣರಾವ್





ರಾಯಚೂರು, ಜೂ.15-

ಹಿರಿಯ ನಾಗರಿಕರ ಮೇಲಿನ ಶೋಷಣೆ, ನಿರ್ಲಕ್ಷ್ಯ ಮತ್ತು ಹಿಂಸಾಚಾರ ತಡೆಯಲು ಸಮಾಜದಲ್ಲಿ ಜಾಗೃತಿ ಮೂಡಿಸುವುದು ಅತ್ಯಗತ್ಯ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರಾದ ಸಿದ್ಧರಾಮಪ್ಪ ಕಲ್ಯಾಣರಾವ್ ಅಭಿಪ್ರಾಯಪಟ್ಟರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಸುರಕ್ಷ ಸಂಸ್ಥೆ, ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ ಹಾಗೂ Rotary Club Krishna-Tunga Raichur ಇವರ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾ ನೌಕರರ ಮನೋರಂಜನ ಕೇಂದ್ರದಲ್ಲಿ ಆಯೋಜಿಸಿದ್ದ ವಿಶ್ವ ಹಿರಿಯ ನಾಗರಿಕರ ಶೋಷಣೆ ಜಾಗೃತಿ ದಿನಾಚರಣೆ 2026 ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಹಿರಿಯ ನಾಗರಿಕರ ಮತ್ತು ಪೋಷಕರ ಪಾಲನೆಪೋಷಣೆ ಹಾಗೂ ಕಲ್ಯಾಣ ಅಧಿನಿಯಮ

4ನೇ ಪುಟ.....

## 19 ರಂದು ಬಂಜಾರ ಸಮಾಜದಲ್ಲಿನ ವರದಕ್ಷಣೆ ಪೀಡುಗು ನಿರ್ಮೂಲನಾ ಕುರಿತು ಚಿಂತನಾ ಸಭೆ-ಅಮರೇಶ ನಾಯಕ

ಲಿಂಗಸುಗೂರು,ಜೂ.15-

ವರದಕ್ಷಿಣೆ ಪಿಡುಗಿನಿಂದ ಬಡ ಕುಟುಂಬಗಳ ಆರ್ಥಿಕ ಸ್ಥಿತಿ ಹದಗೆಡುತ್ತಿದ್ದು, ಈ ಅನಿಷ್ಟ ಪದ್ಧತಿಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಎಲ್ಲರೂ ಕೈಜೋಡಿಸಬೇಕು ಎಂದು ಕೆಪಿಬಿಎಸ್‌ಎಸ್ ಸಂಘದ




ಜಿಲ್ಲಾ ಅಧ್ಯಕ್ಷ ಅಮರೇಶ ನಾಯಕ ಕರೆ ನೀಡಿದರು.

ಸೋಮವಾರ ಪಟ್ಟಣದ ಪತ್ರಿಕಾ ಭವನದಲ್ಲಿ ತಾಲೂಕು ಬಂಜಾರ ಸಂಘದ ವತಿಯಿಂದ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಮದುವೆ ಸಂದರ್ಭದಲ್ಲಿ ವರದಕ್ಷಿಣೆಯ ಒತ್ತಡದಿಂದ ಹೆಣ್ಣುಮಕ್ಕಳ ಪೋಷಕರು ಸಾಲದ ಹೊರೆ ಹೊತ್ತು ಜೀವನ ಸಾಗಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಅನೇಕ ಕುಟುಂಬಗಳು ಸಂಕಷ್ಟಕ್ಕೆ ಸಿಲುಕುತ್ತಿದ್ದು, ಸಮಾಜದಲ್ಲಿ ಜಾಗೃತಿ ಮೂಡಿಸುವುದು ಅತ್ಯಗತ್ಯವಾಗಿದೆ ಎಂದು ತಿಳಿಸಿದರು.

ಲಿಂಗಸಗೂರು ತಾಲೂಕಿನ ತಾಂಡಾಗಳಲ್ಲಿ ಹೆಚ್ಚಿನ ಕುಟುಂಬಗಳು ಆರ್ಥಿಕವಾಗಿ ಹಿಂದುಳಿದಿವೆ. ಬಂಜಾರ ಸಮಾಜದಲ್ಲಿ ತಲೆತಲಾಂತ ರದಿಂದ ಬೆಳೆದು ಬಂದಿರುವ ವರ ದಕ್ಷಿಣೆ ಎಂಬ ಪಿಡುಗನ್ನು ಬೇರುಸಹಿತ ಕಿತ್ತೊಗೆಯುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಅವರು ಅಭಿಪ್ರಾಯ ಪಟ್ಟರು.

ಈ ಹಿನ್ನೆಲೆಯಲ್ಲಿ ಜೂನ್ 19ರಂದು ಲಿಂಗಸಗೂರಿನ ಕಾಳಾಪೂರ ರಸ್ತೆಯಲ್ಲಿರುವ ಸತ್ಯ ಸೇವಾಲಾಲ್ ಬಂಜಾರ ಭವನದಲ್ಲಿ ಪೂರ್ವಭಾವಿ

4ನೇ ಪುಟ.....

# ಸೇಡಂನಲ್ಲಿ ಸಚಿವ ಡಾ.ಶರಣಪ್ರಕಾಶ್ ಪಾಟೀಲ್‌ಗೆ ಅಭಿನಂದನಾ ಸಮಾರಂಭ



ಸೇಡಂ,ಜೂ.15-

ಮೂರನೇ ಬಾರಿಗೆ ಸಚಿವರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮೊದಲ ಬಾರಿಗೆ ಸೇಡಂ ನಗರಕ್ಕೆ ಆಗಮಿಸಿದ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಅವರಿಗೆ ಕಾಂಗ್ರೆಸ್ ಕಾರ್ಯಕರ್ತರು ಅಭಿನಂದನಾ ಸಮಾರಂಭ ಏರ್ಪಡಿಸಿದರು.

ನಗರದ ಶ್ರೀ ಕೊತ್ತಲ ಬಸವೇಶ್ವರ ದೇವಾಲಯ ಆವರಣದಲ್ಲಿರುವ ನಾಗೇಂದ್ರಪ್ಪ ಪಾಟೀಲ ಬೊಮ್ನಳ್ಳಿ ಕಲ್ಯಾಣ ಮಂಟಪದಲ್ಲಿ ನಡೆದ ಸಮಾರಂಭದಲ್ಲಿ ಸಾವಿರಾರು ಕಾರ್ಯಕರ್ತರು ಹಾಗೂ ಮುಖಂಡರು ಭಾಗವಹಿಸಿ ಸಚಿವರನ್ನು ಸನ್ಮಾನಿಸಿದರು.

ಸಮಾರಂಭವನ್ನುದ್ದೇಶಿಸಿ ಮಾತನಾಡಿದ ಸಚಿವ ಡಾ.ಶರಣಪ್ರಕಾಶ್ ಪಾಟೀಲ್, ಸಮಾಜದ ಕಟ್ಟಕಡೆಯ ವ್ಯಕ್ತಿಯ ಕಣ್ಣೀರು ಒರೆಸಿ, ಬಡವರ ಬದುಕಿಗೆ ಭದ್ರತೆ ಮತ್ತು ಸ್ವಾಭಿಮಾನ ಒದಗಿಸುವುದೇ ಕಾಂಗ್ರೆಸ್ ಪಕ್ಷದ ಮೂಲ ಸಿದ್ಧಾಂತ ಎಂದು ಹೇಳಿದರು.

ದೇಶ ಮತ್ತು ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗಲೆಲ್ಲ ಜನಪರ ಯೋಜನೆಗಳು ಹಾಗೂ ಬಡವರ ಹಿತದಾಯಕ ಕಾಯ್ದೆಗಳನ್ನು ಜಾರಿಗೆ ತಂದಿದೆ ಎಂದು ಅವರು ತಿಳಿಸಿದರು.

''ಈ ದೇಶದ ಅಭಿವೃದ್ಧಿ ಮತ್ತು ಸ್ವಾಭಿಮಾನದ ಬದುಕು ಕೇವಲ ಶ್ರೀಮಂತರಿಗೆ ಮಾತ್ರ ಸೀಮಿತವಾಗಬಾರದು. ಸಮಾಜದ ಕೊನೆಯ ವ್ಯಕ್ತಿಗೂ ಸಮಾನ ಅವಕಾಶ ಮತ್ತು ಗೌರವ ದೊರಕಬೇಕು. ಇದು ನಮ್ಮ ದೇಶ, ನಮ್ಮ ಸಂವಿಧಾನ ಎಂಬ ಭಾವನೆ ಪ್ರತಿಯೊಬ್ಬ ನಾಗರಿಕನಲ್ಲಿ ಮೂಡಬೇಕು. ಡಾ. ಬಿ.ಆರ್. ಅಂಬೇಡ್ಕರ್ ರಚಿಸಿದ ಸಂವಿಧಾನವೇ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಬಲವಾದ ಅಡಿಪಾಯವಾಗಿದೆ,'' ಎಂದು ಸಚಿವರು ಹೇಳಿದರು.

ರಾಜ್ಯದ ಆಡಳಿತದ ಕುರಿತು ಮಾತನಾಡಿದ ಅವರು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಇತ್ತೀಚೆಗೆ ಅಧಿಕಾರಿಗಳ ಸಭೆ ನಡೆಸಿ ಭ್ರಷ್ಟಾಚಾರ ರಹಿತ ಹಾಗೂ ಪಾರದರ್ಶಕ ಆಡಳಿತಕ್ಕೆ ಕಟ್ಟುನಿಟ್ಟಿನ ಸೂಚನೆ ನೀಡಿರುವುದಾಗಿ ತಿಳಿಸಿದರು.

ಜನಸ್ನೇಹಿ ಆಡಳಿತ ನೀಡುವ ಸಂಕಲ್ಪದೊಂದಿಗೆ ಸರಕಾರ ಕಾರ್ಯನಿರ್ವಹಿಸುತ್ತಿದ್ದು, ಜನರ ನಿರೀಕ್ಷೆಗಳಿಗೆ ತಕ್ಕಂತೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುವುದು ಎಂದು ಭರವಸೆ ನೀಡಿದರು. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರೂಪಿಸಿದ್ದ ಉತ್ತಮ ಆಡಳಿತದ ಪರಂಪರೆಯನ್ನು ಮುಂದುವರಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಪಕ್ಷದ ತಳಮಟ್ಟದ ಕಾರ್ಯಕರ್ತರ ಸೇವೆ ಮತ್ತು ತ್ಯಾಗವನ್ನು ಸ್ಮರಿಸಿದ ಸಚಿವರು ಭಾವುಕರಾದರು. 2000ನೇ ಇಸವಿಯಿಂದ ಜಿಲ್ಲಾ ಪಂಚಾಯತ್ ಸದಸ್ಯನಾಗಿ, ಬಳಿಕ ಶಾಸಕನಾಗಿ ಹಾಗೂ ಸಚಿವನಾಗಿ ಸೇವೆ ಸಲ್ಲಿಸಲು ಕ್ಷೇತ್ರದ ಜನರು ಮತ್ತು ಕಾರ್ಯಕರ್ತರು ನೀಡಿದ ನಿಸ್ವಾರ್ಥ ಬೆಂಬಲವೇ ಕಾರಣ ಎಂದು ಹೇಳಿದರು.

''ರಾಜಕೀಯದಲ್ಲಿ ಎಲ್ಲರಿಗೂ ಹುದ್ದೆ ಸಿಗದೇ ಇರಬಹುದು. ಆದರೆ ಹಗಲಿರುಳು ಪಕ್ಷಕ್ಕಾಗಿ ದುಡಿಯುವ ಸಾಮಾನ್ಯ ಕಾರ್ಯಕರ್ತರೇ ಪಕ್ಷದ ಬೆನ್ನೆಲುಬು. ದೊಡ್ಡ ನಾಯಕರಿಂದ ಮಾತ್ರ ಪಕ್ಷ ಕಟ್ಟಲು ಸಾಧ್ಯವಿಲ್ಲ. ಕಣ್ಣಿಗೆ ಕಾಣದ ಸಾವಿರಾರು ಕಾರ್ಯಕರ್ತರ ಪರಿಶ್ರಮವೇ ಪಕ್ಷವನ್ನು ಗಟ್ಟಿಗೊಳಿಸುತ್ತದೆ. ಕಾರ್ಯಕರ್ತರ ವರ್ಚಸ್ಸು ಹೆಚ್ಚಾದರೆ ಅದು ಪಕ್ಷದ ಶಕ್ತಿಯಾಗಿ ರೂಪಾಂತರಗೊಳ್ಳುತ್ತದೆ. ನಾನು ಸದಾ ಕಾರ್ಯಕರ್ತರ ಬೆನ್ನಿಗೆ ನಿಂತಿರುತ್ತೇನೆ,'' ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಶಿವಶಂಕರ ಮಠದ ಶ್ರೀ ಶಿವಶಂಕರ ಶಿವಾಚಾರ್ಯರು, ಕೊತ್ತಲ ಬಸವೇಶ್ವರ ದೇವಾಲಯದ ಶ್ರೀ ಸದಾಶಿವ ಸ್ವಾಮೀಜಿ ಸೇರಿದಂತೆ ಹಲವಾರು ಧಾರ್ಮಿಕ ಮುಖಂಡರು, ಜನಪ್ರತಿನಿಧಿಗಳು, ಕಾಂಗ್ರೆಸ್ ಮುಖಂಡರು ಹಾಗೂ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು. ಸಮಾರಂಭದಲ್ಲಿ ಸಚಿವರಿಗೆ ಪುಷ್ಪಮಾಲೆ, ಶಾಲು ಹೊದಿಸಿ ಗೌರವ ಸಲ್ಲಿಸಲಾಯಿತು.



# ಬಿಎಸ್‌ಸಿ ಸಂಬಂಧಿತ ಕೃಷಿ ಕೋರ್ಸ್‌ಗೆ ವಿಪುಲ ಅವಕಾಶ: ಸಂತೋಷಕುಮಾರ್ ಪಾಟೀಲ್

ಕಲಬುರಗಿ,ಜೂ.15-

ಬಿಎಸ್ಸಿ ಕೃಷಿ ಸಂಬಂಧಿತ ಕೋರ್ಸ್ ಗಳಿಗೆ ಭವಿಷ್ಯದಲ್ಲಿ ಉತ್ತಮ ಅವಕಾಶಗಳಿದ್ದು, ವಿದ್ಯಾರ್ಥಿಗಳು ಈ ಕೋರ್ಸ್ ನತ್ತ ಆಸಕ್ತಿ ವಹಿಸುವುದು ಅಗತ್ಯವಾಗಿದೆ ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ನೂತನ ಅಧ್ಯಕ್ಷ ಸಂತೋಷಕುಮಾರ್ ಪಾಟೀಲ್ ಹೇಳಿದರು.

ನಗರದ ಡಾ. ಬುಜುರ್ಕೆ ಅಕಾಡೆಮಿಯಲ್ಲಿ ಒಂದು ತಿಂಗಳ ಕಾಲ ತರಬೇತಿ ಪಡೆದು ಬಿಎಸ್ಸಿ ಕೃಷಿ ಸಂಬಂಧಿತ ಕೋರ್ಸ್ ಗಳಲ್ಲಿ ರಾಜ್ಯ ಮಟ್ಟದಲ್ಲಿಉತ್ತಮ ರ್‍ಯಾಂಕ್ ಪಡೆದು ಸಾಧನೆ ತೋರಿದ ವಿದ್ಯಾರ್ಥಿಗಳಿಗೆ ಸನ್ಮಾನ ನೇರವೇರಿಸಿ ಅವರು ಮಾತನಾಡುತ್ತಿದ್ದರು.

ಬಿಎಸ್ಸಿ ಕೃಷಿ ಪದವಿ ಮಾಡಿದ ಅಭ್ಯರ್ಥಿಗಳು ವಿವಿಧ ಸ್ಪರ್ಧಾತ್ಮಕ ಪರೀಕ್ಷೆ ಅದರಲ್ಲೂ ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡುತ್ತಿದ್ದು ಎಐಎಸ್, ಐಪಿಎಸ್ ಹಾಗೂ ಐಎಫ್ ಎಸ್ ನಂತಹ ಉನ್ನತ ಮಟ್ಟದ ಅಧಿಕಾರಿಗಳಾಗಿದ್ದಾರೆ. ಮುಂದಿನ ದಿನಗಳಲ್ಲಿ ಕೃಷಿ ಕ್ಷೇತ್ರವೇ ಹೆಚ್ಚಿನ ಪ್ರಾಮುಖ್ಯತೆ ಪಡೆಯಲಿದೆ. ಹೀಗಾಗಿ ವಿದ್ಯಾರ್ಥಿಗಳು ಆಸಕ್ತಿಯಿಂದ ಪದವಿ ಪಡೆದರೆ ಸಾಧನೆ ನಿಶ್ಚಿತ. ಬುಜುರ್ಕೆ ಅಕಾಡೆಮಿ ರೈತರ ಮಕ್ಕಳಿಗೆ ಕೃಷಿ ಸಂಬಂಧಿತ ಕೋರ್ಸ್ ಗಳಿಗೆ ತರಬೇತಿ ನೀಡುತ್ತಾ ಅವರ ಭವಿಷ್ಯ ರೂಪಿಸುತ್ತಿದೆ ಎಂದು ಪಾಟೀಲ್ ಹೇಳಿದರು.

ಅಕಾಡೆಮಿಯ ನಿರ್ದೇಶಕ ಡಾ. ಶಿವರಾಜ ಜಿ. ಬುಜುರ್ಕೆ ಮಾತನಾಡಿ, ತಮ್ಮಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳು ಪ್ರಮುಖವಾಗಿ ಅಗ್ರಿಕಲ್ಚರ್ ವೆಟರ್ನರಿ ವಿಭಾಗದಲ್ಲಿ ಪ್ರವೇಶ ಪಡೆಯುವ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಅತ್ಯುತ್ತಮ ರ್‍ಯಾಂಕ್ ಪಡೆದಿರುವುದು ಸಂತಸ ತಂದಿದೆ ಎಂದರು. ಹಿರಿಯ ಪತ್ರಕರ್ತ ಹಣಮಂತರಾವ್ ಭೈರಾಮಡಗಿ ಹಾಗೂ ಸಂಗಣ್ಣ ಸತ್ಯಂಪೇಟೆ ಮಾತನಾಡಿ ವಿದ್ಯಾರ್ಥಿಗಳು ಪರಿಶ್ರಮ ಪಟ್ಟು ಅಭ್ಯಾಸ ಮಾಡಿದರೆ ಉತ್ತಮ ಫಲಿತಾಂಶ ಪಡೆದುಕೊಳ್ಳಬಹುದು ಎಂದರು. ಡಾ. ಬುಜುರ್ಕೆ ಅಕಾಡೆಮಿಯ ಕಾರ್ಯದರ್ಶಿ ನಿರ್ಮಲಾ ಶಿವರಾಜ ಬುಜುಕೆರ್, ಪ್ರಮುಖರಾದ ಸಿ.ಬಿ. ಹಿರೇಮಠ, ಅನಂತಚೈತನ್ಯ ಬಜುಕೆರ್, ಸುಷ್ಮಾ ಬುಜುಕೆರ್, ಸಂಗಣ್ಣ ಸತ್ಯಂಪೇಟೆ, ಮಲ್ಲಿಕಾರ್ಜುನ ಬಿರಾದಾರ ಸೇರಿದಂತೆ ಹಲವರು ಈ ವೇಳೆ ಉಪಸ್ಥಿತರಿದ್ದರು.



# ಅಭಿವೃದ್ಧಿ ಕುಂಠಿತ ಖಂಡಿಸಿ ಬಿಜೆಪಿಯಿಂದ ಬೃಹತ್ ಪ್ರತಿಭಟನೆ

ಕಲಬುರಗಿ,ಜೂ.15-

ನಗರದ ದಕ್ಷಿಣ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ 47 ಹಾಗೂ 48ರಲ್ಲಿ ಮೂಲಭೂತ ಸೌಕರ್ಯಗಳು ಮತ್ತು ಅಭಿವೃದ್ಧಿ ಕಾಮಗಾರಿಗಳು ಸಂಪೂರ್ಣ ಕುಂಠಿತಗೊಂಡಿರುವುದನ್ನು ಖಂಡಿಸಿ, ಕಲಬುರಗಿ ಬಿಜೆಪಿ ದಕ್ಷಿಣ ಮಂಡಲ ಹಾಗೂ ಸ್ಥಳೀಯ ನಾಗರಿಕರ ನೇತೃತ್ವದಲ್ಲಿ ಶಹಾಬಾದ್ ಕ್ರಾಸ್ ಸಮೀಪ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯಲ್ಲಿ ಭಾಗವಹಿಸಿದ ಮುಖಂಡರು ಮತ್ತು ನಾಗರಿಕರು, ವಾರ್ಡ್‌ಗಳಲ್ಲಿ ರಸ್ತೆ, ಚರಂಡಿ, ಕುಡಿಯುವ ನೀರು, ಬೀದಿ ದೀಪ ಸೇರಿದಂತೆ ಹಲವು ಮೂಲಭೂತ ಸಮಸ್ಯೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿದ್ದಾರೆ ಎಂದು ಆರೋಪಿಸಿದರು. ಜನರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಿ ಅಗತ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ವಾರ್ಡ್‌ಗಳ ಅಭಿವೃದ್ಧಿಗೆ ಅಗತ್ಯ ಅನುದಾನ ಬಿಡುಗಡೆ ಮಾಡಿ ಬಾಕಿ ಉಳಿದಿರುವ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಇನ್ನಷ್ಟು ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಪಾಲಿಕೆ ಸದಸ್ಯರಾದ ವೀರಣ್ಣ ಹೊನ್ನಳ್ಳಿ, ಹೊನ್ನಮ್ಮ ಬಾಬು ಹಾಗರಗಿ, ವಿಶಾಲ್ ಧರ್ಗಿ, ಶಂಭು ಪಾಟೀಲ್ ಬಾಳಬಟ್ಟಿ, ಮಲ್ಲು ಊದನೂರ, ಗುರು ಪಟ್ಟಣ, ಮುಖಂಡರಾದ ರವಿ ಹಾಗರಗಿ, ಸಿದ್ರಾಮ ಮಹಾಂತಗೋಳ, ಸಿದ್ದಣ್ಣ ಬುಳ್ಳಾ, ಪ್ರಕಾಶ ಪಾಟೀಲ್ ಹಿರಾಪುರ, ರಾಜು ವಾಡೇಕರ, ಜಗನ್ನಾಥ ಪಟ್ಟಣಶೆಟ್ಟಿ, ಮಹಾದೇವ ಬೆಳಮಗಿ, ವಿಜಯಲಕ್ಷ್ಮಿ ಗೊಬ್ಬೂರಕರ, ಜ್ಯೋತಿ ಪಾಟೀಲ್, ಶ್ರೀನಿವಾಸ್ ದೇಸಾಯಿ, ವಿಶ್ವನಾಥ ಸಾಲಿಮಠ, ರಾಜಶೇಖರ ನಂದೂರ, ಅಮಿತ ಚಿಟ್ಟಗುಪ್ಪಿ, ಗುಂಡು ಮಹಾಂತಗೋಳ, ಚನ್ನು ಬಿರಾದಾರ, ಅಪ್ಪಾಸಾಬ್ ಜಂಗ್ಳೆ, ಉದಯ ರೇಷ್ಮಿ, ಮಲ್ಲಿಕಾರ್ಜುನ ಜಿನಕೇರಿ ಸೇರಿದಂತೆ ಬಿಜೆಪಿ ಮುಖಂಡರು ಹಾಗೂ ಸ್ಥಳೀಯ ನಿವಾಸಿಗಳು ಭಾಗವಹಿಸಿದ್ದರು. ಪ್ರತಿಭಟನೆಯ ವೇಳೆ ವಾರ್ಡ್‌ಗಳ ಸಮಗ್ರ ಅಭಿವೃದ್ಧಿಗೆ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

# ಅಪರೂಪದ ಹಿಪ್ ಜಾಯಿಂಟ್ ಕಾಯಿಲೆಗೆ ಯಶಸ್ವಿ ಶಸ್ತ್ರ ಚಿಕಿತ್ಸೆ ನಡೆಸಿದ ಆದಿತ್ಯ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯರ ತಂಡ

ಕಲಬುರಗಿ,ಜೂ.15-

ಲಕ್ಷಾಂತರ ಜನರಲ್ಲಿ ಒಬ್ಬರಿಗೆ ಮಾತ್ರ ಕಾಣಿಸಿಕೊಳ್ಳುವ ಅಪರೂಪದ ಸ್ಪಾಂಡಿಲೋ ಎಪಿಫೈಸಿಯಲ್ ಡಿಸ್ಪ್ಲಾಸಿಯಾ ಎಂಬ ಹಿಪ್ ಜಾಯಿಂಟ್ ಕಾಯಿಲೆಯಿಂದ ಬಳಲುತ್ತಿದ್ದ ಯುವಕನಿಗೆ ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸುವ ಮೂಲಕ ನಗರದ ಆದಿತ್ಯ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯರ ತಂಡ ಹೊಸ ಜೀವನ ನೀಡಿದೆ.

ನಗರದ ಆದಿತ್ಯ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ರವಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆಯ ನಿರ್ದೇಶಕ, ಆರ್ಥೋಪೆಡಿಕ್ ತಜ್ಞರಾದ ಡಾ. ಆದಿತ್ಯ ಕಾಜಾ ಮಾತನಾಡಿ, ಹಿಪ್ ಜಾಯಿಂಟ್‌ನ ದ್ವಿಪಾರ್ಶ್ವೀಯ () ಸ್ಪಾಂಡಿಲೋ ಎಪಿಫೈಸಿಯಲ್




ಡಿಸ್ಪ್ಲಾಸಿಯಾ ಸಮಸ್ಯೆಯಿಂದ ಬಳಲುತ್ತಿದ್ದ ಯುವಕ ಹಲವು ವರ್ಷಗಳಿಂದ ತೀವ್ರ ನೋವು, ನಡೆಯಲು ತೊಂದರೆ ಹಾಗೂ ದೈನಂದಿನ ಚಟುವಟಿಕೆಗಳಲ್ಲಿ ಸಂಕಷ್ಟ ಅನುಭವಿಸುತ್ತಿದ್ದನು. ಈ ಅಪರೂಪದ ಕಾಯಿಲೆ ಸುಮಾರು ಒಂದು ಲಕ್ಷದಿಂದ ಎರಡು ಲಕ್ಷ ಜನರಲ್ಲಿ ಒಬ್ಬರಿಗೆ ಮಾತ್ರ ಕಂಡುಬರುತ್ತದೆ ಎಂದು ತಿಳಿಸಿದರು.

ಚಿಕಿತ್ಸೆಗಾಗಿ ರೋಗಿಯು ಕಲಬುರಗಿ, ಸೊಲ್ಲಾಪುರ ಸೇರಿದಂತೆ ಹಲವು ಆಸ್ಪತ್ರೆಗಳಿಗೆ ಭೇಟಿ ನೀಡಿದ್ದರೂ, ಸ್ಥಳೀಯವಾಗಿ ಇಂತಹ ಶಸ್ತ್ರಚಿಕಿತ್ಸೆ ಸಾಧ್ಯವಿಲ್ಲ ಎಂದು ವೈದ್ಯರು ತಿಳಿಸಿದ್ದರು.

ಕೆಲವರು ಮುಂಬೈನಿಂದ ತಜ್ಞ ವೈದ್ಯರನ್ನು ಕರೆಸಿ ಚಿಕಿತ್ಸೆ ಪಡೆಯುವಂತೆ ಸಲಹೆ ನೀಡಿದ್ದರು. ಬಳಿಕ ಸ್ನೇಹಿತರ ಸಲಹೆಯ ಮೇರೆಗೆ ಆದಿತ್ಯ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗೆ ಭೇಟಿ ನೀಡಿದ ರೋಗಿಯನ್ನು ಆಸ್ಪತ್ರೆಯ ತಜ್ಞರ ತಂಡ ಸಮಗ್ರವಾಗಿ ಪರೀಕ್ಷಿಸಿ, ರೋಗವನ್ನು ನಿಖರವಾಗಿ ಪತ್ತೆಹಚ್ಚಿ ಚಿಕಿತ್ಸಾ ಯೋಜನೆ ರೂಪಿಸಿತು ಎಂದರು.

ರೋಗಿಯ ಎರಡೂ ಹಿಪ್ ಜಾಯಿಂಟ್‌ಗಳು ಹಾನಿಗೊಳಗಾಗಿದ್ದರಿಂದ ಮೊದಲು ಹೆಚ್ಚು ಸಮಸ್ಯೆ ಉಂಟುಮಾಡುತ್ತಿದ್ದ ಎಡಭಾಗದ ಹಿಪ್‌ಗೆ ಕಳೆದ ಅಕ್ಟೋಬರ್ ತಿಂಗಳಲ್ಲಿ ಶಸ್ತ್ರಚಿಕಿತ್ಸೆ ನಡೆಸಲಾಯಿತು. ಶಸ್ತ್ರಚಿಕಿತ್ಸೆಯ ಬಳಿಕ ಉತ್ತಮ ಚೇತರಿಕೆ ಕಂಡುಬಂದ ಹಿನ್ನೆಲೆಯಲ್ಲಿ ಮಾರ್ಚ್ ತಿಂಗಳಲ್ಲಿ ಬಲಭಾಗದ ಹಿಪ್ ಜಾಯಿಂಟ್‌ನ ಶಸ್ತ್ರಚಿಕಿತ್ಸೆಯನ್ನೂ ಯಶಸ್ವಿಯಾಗಿ ನೆರವೇರಿಸಲಾಯಿತು ಎಂದು ಹೇಳಿದರು.

ಎರಡೂ ಹಿಪ್ ಜಾಯಿಂಟ್‌ಗಳಿಗೆ ಟೋಟಲ್ ಹಿಪ್ ರಿಪ್ಲೇಸ್ಮೆಂಟ್ ( ) ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನಡೆಸಲಾಗಿದ್ದು, ಪ್ರಸ್ತುತ ರೋಗಿಯು ನೋವಿನಿಂದ ಸಂಪೂರ್ಣ ಮುಕ್ತನಾಗಿ ಸಾಮಾನ್ಯ ಜೀವನ ನಡೆಸುತ್ತಿರುವುದಾಗಿ ಡಾ. ಆದಿತ್ಯ ಕಾಜಾ ತಿಳಿಸಿದರು.

ರೋಗಿಯ ಚಿಕಿತ್ಸೆಯ ಅಗತ್ಯವನ್ನು ಮನಗಂಡ ಆಸ್ಪತ್ರೆಯ ವೈದ್ಯಕೀಯ ತಂಡ ವಿಶೇಷ ಪ್ರಯತ್ನದ ಮೂಲಕ ಚೆನ್ನೈನಿಂದ ಇಂಪ್ಲಾಂಟ್ ತರಿಸಿ, ಸಮಯಕ್ಕೆ ಸರಿಯಾಗಿ ಶಸ್ತ್ರಚಿಕಿತ್ಸೆ ಪೂರ್ಣಗೊಳಿಸಿತು. ವೈದ್ಯರು, ತಾಂತ್ರಿಕ ಸಿಬ್ಬಂದಿ ಹಾಗೂ ನಿರ್ವಹಣಾ ತಂಡದ ಸಮನ್ವಯದಿಂದ ಅತ್ಯಾಧುನಿಕ ಚಿಕಿತ್ಸೆಯನ್ನು ಯಶಸ್ವಿಯಾಗಿ ಒದಗಿಸಲು ಸಾಧ್ಯವಾಯಿತು ಎಂದು ವೈದ್ಯರು ಹೇಳಿದರು.

ಸ್ಪಾಂಡಿಲೋಎಪಿಫೈಸಿಯಲ್ ಡಿಸ್ಪ್ಲಾಸಿಯಾ ಕಾಯಿಲೆಯಿಂದ ಬಳಲುವವರಲ್ಲಿ ಸೊಂಟ ನೋವು, ಬೆನ್ನು ನೋವು, ನಡೆಯಲು ತೊಂದರೆ, ಕೀಲುಗಳ ಬಿಗಿತ ಹಾಗೂ ಕಡಿಮೆ ಎತ್ತರದಂತಹ ಲಕ್ಷಣಗಳು ಕಂಡುಬರಬಹುದು. ಕೆಲವರಲ್ಲಿ ವಯಸ್ಸಿಗೆ ಮುನ್ನವೇ ಕೀಲು ಸವೆತದ ಸಮಸ್ಯೆಯೂ ಕಾಣಿಸಿಕೊಳ್ಳುವ ಸಾಧ್ಯತೆ ಇದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಡಾ. ಮೌನಿಕಾ ಬಿಂದು (ರೇಡಿಯೋ ಡಯಾಗ್ನೋಸಿಸ್), ಡಾ. ಜಯಂತ್ ಕಾಜಾ (ಅರ್ಥೋಪೆಡಿಕ್ ಸರ್ಜನ್), ಡಾ. ಪ್ರಿಯಾಂಕ ಕನ್ನಿ (ಅನೆಸ್ಥೀಷಿಯಾ) ಹಾಗೂ ಡಾ. ಅನಿಲ್ ಕಾಂಬಳೆ (ಜನರಲ್ ಮೆಡಿಸಿನ್) ಉಪಸ್ಥಿತರಿದ್ದರು.

# ಮತದಾನದ ಹಕ್ಕು ಕಸಿದುಕೊಳ್ಳುವುದು ಪ್ರಜಾಪ್ರಭುತ್ವದ ಕಗ್ಗೊಲೆ: ಡಾ. ಜ್ಞಾನಪ್ರಕಾಶ ಸ್ವಾಮೀಜಿ




ಬೀದರ್,ಜೂ.15-

ಭಾರತೀಯ ಸಂವಿಧಾನವು ದೇಶದ ಎಲ್ಲ ನಾಗರಿಕರಿಗೆ ಸಮಾನ ಹಕ್ಕು, ಸಮಾನ ರಕ್ಷಣೆ ಹಾಗೂ ಸಮಾನ ಪ್ರಗತಿಯ ಅವಕಾಶಗಳನ್ನು ನೀಡಿದ್ದು, ದೇಶದ ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವ ಅಧಿಕಾರವನ್ನು ಪ್ರಜೆಗಳಿಗೆ ನೀಡಿದೆ. ಆದರೆ ಕೇಂದ್ರ ಸರ್ಕಾರದ ಸೂಚನೆಯಂತೆ ಚುನಾವಣಾ ಆಯೋಗ ಎಸ್‌ಐರ್ಆ ಹೆಸರಿನಲ್ಲಿ ಬಡ ಜನರ ಮತದಾನದ ಹಕ್ಕನ್ನು ಕಸಿದುಕೊಳ್ಳುವ ಪ್ರಯತ್ನ ನಡೆಸುತ್ತಿರುವುದು ಪ್ರಜಾಪ್ರಭುತ್ವದ ಕಗ್ಗೊಲೆಯಾಗಿದೆ ಎಂದು ಮೈಸೂರಿನ ಉರಿಲಿಂಗಪೆದ್ದಿ ಮಠದ ಡಾ. ಜ್ಞಾನಪ್ರಕಾಶ್ ಸ್ವಾಮೀಜಿ ಹೇಳಿದರು.

ಬಕ್ಕಚೌಡಿ ಗ್ರಾಮದಲ್ಲಿ ಶುಕ್ರವಾರ ಆಯೋಜಿಸಿದ್ದ ತಥಾಗತ ಗೌತಮ ಬುದ್ಧ ಮಹಾದ್ವಾರ ಹಾಗೂ ವಿಶ್ವಜ್ಞಾನಿ ಡಾ. ಬಿ.ಆರ್. ಅಂಬೇಡ್ಕರ್ ಮೂರ್ತಿ ಅನಾವರಣ ಸಮಾರಂಭದಲ್ಲಿ ಅವರು ಮಾತನಾಡಿ, ಮತದಾನದ ಹಕ್ಕು ರಕ್ಷಿಸಿಕೊಳ್ಳಲು ಜನರು ಹೋರಾಟ ನಡೆಸುವುದು ಅನಿವಾರ್ಯವಾಗಿದೆ ಎಂದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರವಾದ) ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಅವರು ಮಾತನಾಡಿ, ಎಸ್‌ಐರ್ಆ ಪ್ರಕ್ರಿಯೆ ಜಾರಿಯಾದರೆ ಔರಾದ್ (ಬಿ) ಕ್ಷೇತ್ರದ ಶಾಸಕ ಪ್ರಭು ಚವ್ಹಾಣ ಸೇರಿದಂತೆ ಅನೇಕ ಜನರ ಮತದಾನದ ಹಕ್ಕು ಕಳೆದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಬಹುದು ಎಂದು ಎಚ್ಚರಿಸಿದರು.

ಚಿಂತಕ ಪ್ರೊ. ಶಿವಶರಣಪ್ಪ ಹುಗ್ಗಿ ಪಾಟೀಲ್ ಅವರು ಮಾತನಾಡಿ, ಜೀವ ಜಗತ್ತಿಗೆ ಸಮತೆ, ಮಮತೆ, ಪ್ರೀತಿ, ಕರುಣೆ ಹಾಗೂ ಶಾಂತಿಯನ್ನು ನೀಡಿದ ಗೌತಮ ಬುದ್ಧರ ಮಹಾದ್ವಾರವು ಮೈತ್ರಿ ಭಾವನೆ ಮತ್ತು ಭಾವೈಕ್ಯತೆಯ ಸಂದೇಶ ಸಾರುತ್ತದೆ. ಸಂಚಲಿತ ಸಮಾಜಕ್ಕೆ ಸ್ಥಿರ ಮೌಲ್ಯಗಳನ್ನು ಬಿತ್ತಿದವರು ಬುದ್ಧ, ಬಸವ ಹಾಗೂ ಡಾ. ಅಂಬೇಡ್ಕರ್ ಅವರಾಗಿದ್ದಾರೆ ಎಂದು ಹೇಳಿದರು.

ಡಾ. ಸಿದ್ದರಾಮೇಶ್ವರ್ ಬೆಲ್ದಾಳ ಶರಣರು, ಮಾಜಿ ಶಾಸಕ ಬಂಡೆಪ್ಪ ಖಾಶೆಂಪೂರ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯೆ ಶಕುಂತಲಾ ಬೆಲ್ದಾಳೆ, ಹೊಣ್ಣೂರು ಶ್ರೀನಿವಾಸ್, ಅನಿಲ ಕುಮಾರ್ ಬೆಲ್ದಾರ್ ಬಾಬುರಾವ್ ಪಾಶ್ವಾನ್, ಶ್ರೀಪತರಾವ್ ದೀನೆ ಹಾಗೂ ರಮೇಶ್ ಡಾಕುಳಗಿ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಸಂತೋಷ್ ಸಂಗಮ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಕೃಷ್ಣ ಆಣದೂರ್, ಪ್ರಭುಲಿಂಗ್, ವೀರಶೆಟ್ಟಿ ಕಾಂಬಳೆ ಸೇರಿದಂತೆ ಗ್ರಾಮಸ್ಥರು ಭಾಗವಹಿಸಿದ್ದರು. ನ್ಯಾಯವಾದಿ ಪರಮೇಶ್ವರ್ ಗುಬ್ಬಿ ಸ್ವಾಗತಿಸಿದರು. ಅಂಬಾದಾಸ್ ಗಾಯಕವಾಡ್ ನಿರೂಪಿಸಿದರು.

# ಪಟೇಲ್ ಮಂಚ್ ವತಿಯಿಂದ ಎಸ್‌ಐಆರ್ ಕುರಿತು ವಿಚಾರ ಸಂಕಿರಣ

ಕಲಬುರಗಿ,ಜೂ.15-

ನಗರದ ವಿದ್ಯುತ್ ಸರಬರಾಜು ಸಭಾಂಗಣದಲ್ಲಿ ಮುಸ್ಲಿಂ ಪಟೇಲ್ ಮಂಚ್ ವತಿಯಿಂದ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆ)ರ್ ಕುರಿತು ಶನಿವಾರ ವಿಚಾರ ಸಂಕಿರಣ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಅಫಜಲಪುರದ ಕಾಂಗ್ರೆಸ್ ಮುಖಂಡರಾದ ಮತೀನ್ ಪಟೇಲ್ ಹಾಗೂ ಮೆರಾಜ್ ಪಟೇಲ್ ತಾವರಗೇರಾ ಅವರ ನೇತೃತ್ವದಲ್ಲಿ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಪಟೇಲ್ ಮಂಚ್‌ನ ಮುಖಂಡರು, ಸದಸ್ಯರು ಹಾಗೂ ಸಮಾಜದ ವಿವಿಧ ಗಣ್ಯರು ಭಾಗವಹಿಸಿ ಮತದಾರರ ಹಕ್ಕುಗಳ ಸಂರಕ್ಷಣೆ ಮತ್ತು ಮತದಾರರ ಪಟ್ಟಿಯ ಪರಿಷ್ಕರಣೆ ಕುರಿತು ಚರ್ಚಿಸಿದರು.



ಕಾರ್ಯಕ್ರಮದಲ್ಲಿ ಎಸ್‌ಐಆರ್ ಪ್ರಕ್ರಿಯೆಯ ಮಹತ್ವ, ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ, ತಿದ್ದುಪಡಿ ಹಾಗೂ ಮತದಾನದ ಹಕ್ಕಿನ ಸಂರಕ್ಷಣೆ ಕುರಿತಂತೆ ಸವಿಸ್ತಾರ ಮಾಹಿತಿ ನೀಡಲಾಯಿತು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾರರ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು, ಪ್ರತಿಯೊಬ್ಬ ಅರ್ಹ ನಾಗರಿಕರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಮತದಾನದ ಹಕ್ಕನ್ನು ಚಲಾಯಿಸಬೇಕು ಎಂದು ಹೇಳಿದರು.

ಮತೀನ್ ಪಟೇಲ್ ಮಾತನಾಡಿ, ಮತದಾರರ ಪಟ್ಟಿಯ ಪರಿಷ್ಕರಣೆ ಕಾರ್ಯದಲ್ಲಿ ಸಾರ್ವಜನಿಕರು ಸಕ್ರಿಯವಾಗಿ ಪಾಲ್ಗೊಂಡು ತಮ್ಮ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕಾಪಾಡಿಕೊಳ್ಳಬೇಕು ಎಂದು ತಿಳಿಸಿದರು. ಮೆರಾಜ್ ಪಟೇಲ್ ತಾವರಗೇರಾ ಅವರು ಎಸ್‌ಐಆರ್ ಪ್ರಕ್ರಿಯೆಯ ಕುರಿತು ಜನರಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವ ಅಗತ್ಯವಿದ್ದು, ಈ ನಿಟ್ಟಿನಲ್ಲಿ ಸಮಾಜದ ಸಂಘಟನೆಗಳು ಮುಂದಾಗಬೇಕು ಎಂದು ಅಭಿಪ್ರಾಯಪಟ್ಟರು.

ಸಂಕಿರಣದಲ್ಲಿ ಭಾಗವಹಿಸಿದ್ದ ಸದಸ್ಯರು ಮತದಾರರ ಹಕ್ಕುಗಳ ರಕ್ಷಣೆ, ಜನಜಾಗೃತಿ ಕಾರ್ಯಕ್ರಮಗಳ ಅಗತ್ಯತೆ ಹಾಗೂ ಮತದಾರರ ಪಟ್ಟಿಯ ಸಮರ್ಪಕ ನಿರ್ವಹಣೆ ಕುರಿತಂತೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಮತದಾರರ ಹಕ್ಕುಗಳ ಸಂರಕ್ಷಣೆಗಾಗಿ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸುವ ಸಂಕಲ್ಪವನ್ನೂ ವ್ಯಕ್ತಪಡಿಸಿದರು.

ಕಾರ್ಯಕ್ರಮವನ್ನು ಅಭಿಷೇಕ್ ಅಲ್ಲಂ ಪ್ರಭು ಪಾಟೀಲ್ ಮುನ್ನಡೆಸಿದರು. ಅಬ್ದುಲ್ ರಹೀಂ ಪಟೇಲ್ ವಿಷಯದ ಕುರಿತು ವಿವರವಾದ ಮಾಹಿತಿ ನೀಡಿದರು. ಮುಖ್ಯ ಅತಿಥಿಯಾಗಿ ಲಾಲ್ ಅಹ್ಮದ್ ಬಾಂಬೆ ಸೇಠ್ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಮತೀನ್ ಪಟೇಲ್, ಪಪ್ಪು ಪಟೇಲ್, ಬಾಷಾ ಪಟೇಲ್, ರಹಮಾನ್ ಪಟೇಲ್, ತಾಜುದ್ದೀನ್ ಪಟೇಲ್, ರುಕುಮ್ ಪಟೇಲ್, ಯೂಸುಫ್ ಪಟೇಲ್ , ಮೋದೀನ್ ಪಟೇಲ್ ಅನಬಿ, ರಾಜಾ ಪಟೇಲ್, ಇಲಿಯಾಸ್ ಪಟೇಲ್, ಬಾಬಾ ಪಟೇಲ್ ಸೇರಿದಂತೆ ಸಮಾಜದ ಹಲವು ಗಣ್ಯರು ಉಪಸ್ಥಿತರಿದ್ದರು.

## ಒಂದನೇಯ ಪುಟದಿಂದ

## ಭ್ರಷ್ಟಾಚಾರ ನಿಯಂತ್ರಣಕ್ಕೆ ಶೀಘ್ರದಲ್ಲೇ ಖಾಯಂ ಪರಿಹಾರ : ಗೃಹ ಸಚಿವ ಪ್ರಿಯಾಂಕ್ ಖರ್ಗೆ

ಒಂದು ಹೇಳಿಕೆಯನ್ನು ಜವಾಬ್ದಾರಿಯುತವಾಗಿ ನೀಡಿದ್ದರೆ ತೋರಿಸಲಿ ಎಂದು ಸವಾಲು ಹಾಕಿದರು.

ಹಿಂದೆ ಅವರ ಸರ್ಕಾರದಲ್ಲಿ ಲಂಚಪಡೆಯುವಾಗ ಶಾಸಕರೇ ಲೋಕಾಯುಕ್ತ ದಾಳಿಗೆ ಸಿಲುಕಿದ್ದರು. ಅದಕ್ಕೆ ಬಿಜೆಪಿಯ ನಾಯಕರು ಏನು ಹೇಳುತ್ತಾರೆ. ಅದರ ಬಗ್ಗೆಯೂ ಅವರ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಲಿ. ಬೇರೆಯವರ ಬಗ್ಗೆ ಮಾತನಾಡುವಾಗ ತಮ ಹೊಣೆಗಾರಿಕೆಗಳ ಬಗ್ಗೆ ಕೂಡ ನೈತಿಕವಾಗಿ ಪ್ರತಿಕ್ರಿಯಿಸಬೇಕೆಂದು ತಿರುಗೇಟು ನೀಡಿದರು.

## ಜಮೀರ್ ಅಹಮದ್ ಖಾನ್‌ಗೆ ಡಿಸಿಎಂ ಸ್ಥಾನ ನೀಡುವಂತೆ ಆಗ್ರಹಿಸಿ ಬೆಂಬಲಿಗರಿಂದ ವಿಧಾನಸೌಧ ಚಲೋ

ಈ ವೇಳೆ ಮುಸ್ಲಿಂ ಸಮುದಾಯದ ಮೌಲಿಗಳು ಪತ್ರಿಕಾಗೋಷ್ಠಿ ನಡೆಸಿ, ಕಾಂಗ್ರೆಸ್ ವಿರುದ್ಧ ಬಹಿರಂಗವಾಗಿಯೇ ಅಸಮಾಧಾನ ಹೊರ ಹಾಕಿದ್ದರು. ಪಕ್ಷದ ವಿರುದ್ಧ ಹೇಳಿಕೆಗಳು ಕೇಳಿ ಬರುತ್ತಿದ್ದರೂ ಕೂಡ ಜಮೀರ್ ಅಹಮದ್ ಖಾನ್ ಯಾವುದೇ ಪ್ರತಿಕ್ರಿಯೆ ನೀಡದೆ ಜಾರಿಕೊಂಡಿದ್ದರು. ಈ ಎಲ್ಲದರ ನಂತರ ಆಡಿಯೋವೊಂದು ವೈರಲ್ ಆಗಿತ್ತು. ಅದರಲ್ಲಿ ಜಮೀರ್ ಅಹಮದ್ ಖಾನ್ ಕಾಂಗ್ರೆಸ್ ಅಭ್ಯರ್ಥಿಯ ವಿರುದ್ಧ ಕೆಲಸ ಮಾಡುವಂತೆ ತಮ ಸಮುದಾಯದ ಮುಖಂಡರಿಗೆ ಸಂದೇಶ ನೀಡಿರುವುದಾಗಿ ತಿಳಿದು ಬಂದಿದೆ.

ಈ ಆಡಿಯೋ ಜಮೀರ್ ಅವರನ್ನು ಅಧಿಕಾರದಿಂದ ದೂರ ಇಡುವಂತೆ ಮಾಡಿದೆ. ಹಲವು ಬಾರಿ ಶಿಸ್ತಿನ ಪಾಠ ಮಾಡಿದ್ದರೂ ಬೆಲೆ ನೀಡದ ಜಮೀರ್, ಈಗ ಸಂಪುಟದ ಸಚಿವ ಸ್ಥಾನಕ್ಕಾಗಿ ನಾನಾ ರೀತಿಯ ಸರ್ಕಸ್ ಮಾಡುತ್ತಿದ್ದಾರೆ.

## ಸ್ಲಂ ಕ್ರಿಯಾ ವೇದಿಕೆ ಅಧ್ಯಕ್ಷರಾಗಿ ಜನಾರ್ಧನ್ ಹಳ್ಳಿಬೆಂಚಿ ಹಾಗೂ ರಾಜ್ಯ ಸಮಿತಿ ಸದಸ್ಯರಾಗಿ ಎಸ್. ನಾಗರಾಜ್ ಅವಿರೋಧ ಆಯ್ಕೆ

ಸಂಧರ್ಭದಲ್ಲಿ ನಮನ್ನು ಆಯ್ಕೆ ಮಾಡಿದ ಎಲ್ಲಾ ಪಧಾಧಿಕಾರಿಗಳಿಗೂ ಹಾಗೂ ಸರ್ವ ಸದಸ್ಯರಿಗೂ ಮತ್ತು ರಾಜ್ಯ ಸಂಚಾಲಕರಾದ ಎ ನರಸಿಂಹ ಮೂರ್ತಿ ಅವರಿಗೂ ತುಂಬಾ ಹೃದಯ ಪೂರ್ವಕ ಧನ್ಯವಾದಗಳು ಜನಾರ್ಧನ್ ಹಾಗೂ ಎಸ್. ನಾಗರಾಜ್ ತಿಳಿಸಿದರು.

## ರಸ್ತೆ ಬದಿ ನಿಂತಿದ್ದ ಲಾರಿಗೆ ಕಾರು ಢಿಕ್ಕಿ; ಉಪನ್ಯಾಸಕ ಮೃತ್ಯು, ನಾಲ್ವರಿಗೆ ಗಾಯ

ಮಾಹಿತಿ ಲಭ್ಯವಾಗಿದೆ. ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ತೆಲಂಗಾಣ ರಾಜ್ಯದ ನಾರಾಯಣಪೇಟೆ ಠಾಣೆಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ತನಿಖೆ ಮುಂದುವರಿದಿದೆ.

## 19 ರಂದು ಬಂಜಾರ ಸಮಾಜದಲ್ಲಿನ ವರದಕ್ಷಣೆ ಪೀಡುಗು ನಿರ್ಮೂಲನಾ ಕುರಿತು ಚಿಂತನಾ ಸಭೆ-ಅಮರೇಶ ನಾಯಕ

ಸಭೆಯನ್ನು ಆಯೋಜಿಸಲಾಗಿದೆ. ಕಾರಭಾರಿ, ಡಾವ್‌ಸಾಣ, ಹಸಾಬಿ, ನಸಾಬಿ, ಸರಕಾರಿ,ಅರೇಸರಕಾರಿ,ನೌಕರರು, ರಾಜಕೀಯ ಮುಖಂಡರು, ಯುವಕರು,ವಿದ್ಯಾವಂತರು, ಬುದ್ದಿಜೀವಿಗಳು, ಮಹಿಳೆಯರು ಈ ಪೂರ್ವ ಭಾವಿ ಸಭೆಯಲ್ಲಿ ಭಾಗವಹಿಸಿ ಸೂಕ್ತ ಸಲಹೆಸೂಚನೆಗಳನ್ನು ಹಾಗೂ ಮಾರ್ಗದರ್ಶನ ನೀಡಬೇಕೆಂದು, ಹಾಗೂ ಸಮಾಜದ ಸುಧಾರಣೆಗೆ ಕೈಜೋಡಿಸಬೇಕೆಂದು ಸಂಘದ ಪದಾಧಿಕಾರಿಗಳು ತಿಳಿಸಿದ್ದಾರೆ.

ಜೀವಲೇಪ್ಪ ನಾಯಕ ಮಾಜಿ ಜಿ.ಪಂ.ಸದಸ್ಯರು, ಅಮರೇಶ ನಾಯಕ ಜಿಲ್ಲಾಧ್ಯಕ್ಷರು ಕೆಪಿಬಿಎಸ್‌ಎಸ್ ರಾಯಚೂರು, ಶರಣಪ್ಪ ಜಾದವ್ ತಾಲೂಕಾ ಅಧ್ಯಕ್ಷರು ಕೆಪಿಬಿಎಸ್‌ಎಸ್ ಲಿಂಗಸೂಗೂರು, ಡಾ.ನೀಲಪ್ಪ ಪವಾರ ಜಿಲ್ಲಾ ಸಂಚಾಲಕರು ಕೆಪಿಬಿಎಸ್‌ಎಸ್ ರಾಯಚೂರು,ನಾಗರೆಡ್ಡಿ ರಾಠೋಡ ಅಧ್ಯಕ್ಷರು ಕೆಇಬಿ ಗುತ್ತೇದಾರರು ಲಿಂಗಸೂಗೂರು, ರಾಜಕುಮಾರ ಚವ್ಹಾಣ ತಾಲೂಕಾ ಗೌರವಾಧ್ಯಕ್ಷರು ಕೆಪಿಬಿಎಸ್‌ಎಸ್ ಲಿಂಗಸೂಗೂರು, ನಾಗರೆಡ್ಡಿ ಎನ್.ರಾಠೋಡ ಈಚನಾಳತಾಂಡ, ಪ್ರಭುರಾಠೋಡ ತಾಲೂಕಾ ಉಪಾಧ್ಯಕ್ಷರು ಲಿಂಗಸೂಗುರು, ಶಿವಾಜಿ ರಾಠೋಡ ಜಿಲ್ಲಾ ಉಪಾಧ್ಯಕ್ಷರು ಕೆಪಿಬಿಎಸ್‌ಎಸ್ ರಾಯಚೂರು, ಡಾಕು ನಾಯ್ಕ ದಳಪತಿ ಗೋನವಾಡ್ಲ ತಾಂಡ, ಶ್ರೀಕಾಂತ ರಾಠೋಡ ತಾಲೂಕಾ ಕಾರ್ಯಧ್ಯಕ್ಷರು ಕೆಪಿಬಿಎಸ್‌ಎಸ್ ಲಿಂಗಸೂಗೂರು, ತಾಂಬಣ್ಣ ಡಿ.ರಾಠೋಡ ಜಿಲ್ಲಾ ಉಪಾಧ್ಯಕ್ಷರು ಕೆಪಿಬಿಎಸ್‌ಎಸ್ ರಾಯಚೂರು, ಶಿವಪ್ಪ ರಾಠೋಡ, ಉಮೇಶ ಚವ್ಹಾಣ ತಾಲೂಕಾ ಪ್ರಧಾನ ಕಾರ್ಯದ ರ್ಶಿಗಳು ಕೆಪಿಬಿಎಸ್‌ಎಸ್ ಲಿಂಗಸೂಗೂರು, ಖೇರಪ್ಪ ಜಾಧವ ತಾಲೂಕಾ ಉಪಾಧ್ಯಕ್ಷರು ಕೆಪಿಬಿಎಸ್‌ಎಸ್ ಲಿಂಗಸೂಗೂರು, ಗೋವಿಂದ ರಾಠೋಡ ರಾಣಾ ಈಚನಾಳ ತಾಂಡ ಸೇರಿದಂತೆ ಉಪಸ್ಥಿತರಿದ್ದರು.

## ಹಟ್ಟಿ ಚಿನ್ನದ ಗಣಿಯಲ್ಲಿ 3ನೇ ಹಂತದ ಹೋರಾಟ ಆರಂಭ

ಗುತ್ತಿದೆ. ಇದರಿಂದ ಸ್ಥಳೀಯ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ ಎಂದು ಪ್ರತಿಭಟನಾಕಾರರು ದೂರಿದರು.

ಕಾರ್ಮಿಕರ ಹಕ್ಕುಗಳು, ಸಾಮಾಜಿಕ ಭದ್ರತೆ, ಉದ್ಯೋಗ ಭದ್ರತೆ ಹಾಗೂ ಕಲ್ಯಾಣ ಸೌಲಭ್ಯಗಳಿಗೆ ಸಂಬಂಧಿಸಿದ ಬೇಡಿಕೆಗಳ ಕುರಿತು ಹಲವಾರು ಬಾರಿ ಆಡಳಿತದೊಂದಿಗೆ ಚರ್ಚೆ ನಡೆಸಿದರೂ ಯಾವುದೇ ಸ್ಪಷ್ಟ ನಿರ್ಧಾರ ಕೈಗೊಳ್ಳದ ಹಿನ್ನೆಲೆಯಲ್ಲಿ ಧರಣಿ ಅನಿವಾರ್ಯವಾಗಿದೆ ಎಂದು ಸಂಘ ತಿಳಿಸಿದೆ.

ಕೆಲಸದಿಂದ ವಜಾಗೊಂಡಿದ್ದ 9 ಕಾರ್ಮಿಕರ ಪೈಕಿ 4 ಮಂದಿಗೆ ಮರುನೇಮಕಾತಿ (ರೀ-ಇನ್‌ಸ್ಟೇಟ್‌ಮೆಂಟ್) ನೀಡಲಾಗಿದ್ದು, ಉಳಿದ 5 ಕಾರ್ಮಿಕರಿಗೂ ನ್ಯಾಯ ಒದಗಿಸುವಂತೆ ಸಂಘ ಆಗ್ರಹಿಸಿದೆ.

ಕಾರ್ಮಿಕರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವವರೆಗೆ ಧರಣಿಯನ್ನು ಹಿಂಪಡೆಯುವುದಿಲ್ಲ. ಅಗತ್ಯವಿದ್ದಲ್ಲಿ ಮುಂದಿನ ದಿನಗಳಲ್ಲಿ ಚಿನ್ನದ ಉತ್ಪಾದನೆಯನ್ನು ಸ್ಥಗಿತಗೊಳಿಸಿ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಿ ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ವಿಷಯವನ್ನು ಕೊಂಡೊಯ್ಯಲಾಗುವುದು ಎಂದು ಎಸ್.ಎಂ. ಶಫಿ ಎಚ್ಚರಿಕೆ ನೀಡಿದರು.

ಧರಣಿ ಸ್ಥಳದಲ್ಲಿ ಕಾರ್ಮಿಕರು ಕಪ್ಪು ಬಾವುಟಗಳನ್ನು ಪ್ರದರ್ಶಿಸಿ ಆಡಳಿತ ಮಂಡಳಿಯ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಕಾರ್ಮಿಕರ ಸಮಸ್ಯೆಗಳಿಗೆ ಶೀಘ್ರ ಪರಿಹಾರ ಕಂಡುಹಿಡಿದು ಗಣಿಯಲ್ಲಿ ಕೈಗಾರಿಕಾ ಶಾಂತಿ ಕಾಪಾಡಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ಚಂದ್ರಶೇಖರ್ ಆನ್ವರಿ, ಕಾರ್ಯದರ್ಶಿಗಳಾದ ವೆಂಕೋಬ್ ಮಿಯ್ಯಾಪೂರು, ಗೌಸ್ ಮಿಯಾ, ಜಮದಗ್ನಿ, ರಮೇಶ ಬಾಬು, ನಾಗರಾಜ್, ಹನೀಫ್, ಸಿದ್ದಪ್ಪ ಮುಂಡರಗಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಬಾಬು ಸಾಗ್ರ್, ಮುನೀರುದ್ದೀನ್, ಹನುಮಂತಗೌಡ, ಗುಂಡಪ್ಪಗೌಡ, ಮೌನೇಶ, ಕುಪ್ಪಣ್ಣ, ಪೆಂಚಲಮ್ಮ, ಸಿಐಟಿಯು ಜಿಲ್ಲಾ ಸಮಿತಿ ಜಂಟಿ ಕಾರ್ಯದರ್ಶಿ ರಮೇಶ ವೀರಾಪೂರು, ಮೈನುದ್ದೀನ್, ಎಐಟಿಯುಸಿ ಮುಖಂಡ ಸಂಗಯ್ಯಸ್ವಾಮಿ, ಸಿಐಟಿಯು ಮುಖಂಡರಾದ ಫಕ್ರುದ್ದೀನ್, ಪೆಂಚಲಯ್ಯ, ಸೋಮಣ್ಣ ನಾಯಕ್, ರಾಜೇಶ್ವರಿ, ಅಲ್ಲಾಭಕ್ಷ, ಮಹಮ್ಮದ್, ಖಾಜಾ, ರಫಿ, ಬಸವರಾಜ್ ನಗನೂರು, ಯಮುನಪ್ಪ, ನೋವಾ, ಮಿಯ್ಯಾಸಾಬ್, ಶಿವಪ್ಪ ಸೇರಿದಂತೆ ಅನೇಕ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಹಾಗೂ ಕಾರ್ಮಿಕರು ಉಪಸ್ಥಿತರಿದ್ದರು.

ಮೂರು ಹಂತಗಳಲ್ಲಿ ಹೋರಾಟ ತೀವ್ರ

1ನೇ ಹಂತ: ಮೇ 25ರಂದು ಕಾರ್ಮಿಕರು ತಮ್ಮ ಬೇಡಿಕೆಗಳ ಪಟ್ಟಿಯನ್ನು ಯೂನಿಫಾರ್ಮ್‌ಗೆ ಅಳವಡಿಸಿಕೊಂಡು ಕಪ್ಪು ಪಟ್ಟಿ ಧರಿಸಿ ಕೆಲಸಕ್ಕೆ ಹಾಜರಾಗುವ ಮೂಲಕ ಮೊದಲ ಹಂತದ ಹೋರಾಟ ಆರಂಭಿಸಿದ್ದರು.

2ನೇ ಹಂತ: ನಂತರವೂ ಆಡಳಿತದಿಂದ ಸ್ಪಂದನೆ ದೊರೆಯದ ಹಿನ್ನೆಲೆಯಲ್ಲಿ ಜೂನ್ 1ರಿಂದ 14ರವರೆಗೆ ಪ್ರತಿದಿನ ಗಣಿ ಕೆಲಸಕ್ಕೆ ತೆರಳುವ ಮುನ್ನ ಆಡಳಿತದ ವಿರುದ್ಧ ಘೋಷಣೆಗಳನ್ನು ಕೂಗಿ ಪ್ರತಿಭಟನೆ ನಡೆಸಿದರು.

3ನೇ ಹಂತ: ಆದರೂ ನಿರೀಕ್ಷಿತ ಮಟ್ಟದಲ್ಲಿ ಸ್ಪಂದನೆ ದೊರೆಯದ ಕಾರಣ ಇದೀಗ ಮೂರನೇ ಹಂತವಾಗಿ ಕಂಪನಿಯ ಮುಖ್ಯ ಕಾರ್ಯಾಲಯದ ಮುಂದೆ ಕಪ್ಪು ಬಾವುಟ ಹಿಡಿದು ಅನಿರ್ದಿಷ್ಟಾವಧಿ ಪ್ರತಿಭಟನಾ ಧರಣಿ ಆರಂಭಿಸಲಾಗಿದೆ. ಇದಕ್ಕೂ ಆಡಳಿತ ಮಣಿಯದಿದ್ದರೆ ರಾಜ್ಯ ಮಟ್ಟದ ನಾಯಕರೊಂದಿಗೆ ಚರ್ಚಿಸಿ ಚಿನ್ನದ ಉತ್ಪಾದನೆ ಸ್ಥಗಿತಗೊಳಿಸುವ ಹಂತದವರೆಗೂ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಸಂಘದ ಮುಖಂಡರು ತಿಳಿಸಿದ್ದಾರೆ.

## ಜೋಳ ಖರೀದಿ ಮಾಡಿದ ರೈತರ ಖಾತೆಗೆ ಹಣ ಜಮಾ ಮಾಡಿ.ರಸ್ತೆ ತಡೆದು ರೈತ ಸಂಘಟನೆ ಪ್ರತಿಭಟನೆ

ಈಗ ರೈತರುಗಳು ಆರ್ಥಿಕವಾಗಿ ಸಂಕಷ್ಟದಲ್ಲಿ ಇದ್ದು ರೈತರಿಗೆ ಮುಂದಿನ ಬದುಕಿಗೆ ಅವರ ಖಾತೆಗೆ ಹಣ ಜಮೆ ಮಾಡುವುದು ಕೂಡಲೇ ಅವಶ್ಯಕತೆ ಇರುತ್ತದೆ.ಹಾಗಾಗಿ ತಾವುಗಳು ಆದಷ್ಟು ತೀವ್ರದಲ್ಲಿ ರೈತರ ಖಾತೆಗೆ ಜೋಳದ ಮೊತ್ತವನ್ನು ಜಮೆ ಮಾಡುವಂತೆ ಈ ಮನವಿ ಪತ್ರದ ಮೂಲಕ ತಮ್ಮಲ್ಲಿ ಒತಾಯಿಸುತ್ತಿದ್ದೇವೆ ಎಂದು ಹೇಳಿದರು

ಒಂದು ವೇಳೆ ತಾವುಗಳು ಒಂದು ವಾರದೊಳಗಾಗಿ ರೈತರ ಖಾತೆಗೆ ಜೋಳದ ಹಣ ಜಮೆ ಮಾಡದೆ ಹೋದಲ್ಲಿ ರೈತ ಸಂಘವು ಸಿಂಧನೂರು ಬಂದ್ ಕರೆ ಕೊಡುವುದರ ಜೊತೆಗೆ ಹೋರಾಟವನ್ನು ಹಮ್ಮಿಕೊಳ್ಳಲು ಅನಿವಾರ್ಯ ವಾಗುತ್ತದೆ ಎಂದು ರಾಜ್ಯ ಸರ್ಕಾರದ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರಿಗೆ ತಾಲೂಕು ತಹಶೀಲ್ದಾರ್ ಅವರು ಮೂಲಕ ಮನವಿ ಪತ್ರ ಸಲ್ಲಿಸಿ ಆಗ್ರಹಿಸಿ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ರೈತ ಸಂಘಟನೆ ಎಚ್ಚರಿಕೆ ನೀಡಿದರು ಈ ಸಂದರ್ಭದಲ್ಲಿ, ಶಿವನಗೌಡ ತಾಲೂಕು ಅಧ್ಯಕ್ಷರು. ಇಸೂಫ್ ಸಾಬ್ . ಅನ್ನಪ್ಪ ವೀರೇಶ್. ಖಾದ್ರ್ ಚನ್ನೇಗೌಡ. ಚೆನ್ನಯ್ಯ. ಚನ್ನಬಸವ ಬಸಣ್ಣ. ನಾರಾಯಣಪ್ಪ. ಮಲ್ಲಿಕಾರ್ಜುನ ಹಾಗೂ ರೈತರು ಸೇರಿದಂತೆ ಇತರರು ಉಪಸ್ಥಿತರಿದ್ದರು

## ಹಸುರಗುಂಡಗಿ ಗ್ರಾಮಕ್ಕೆ ಮೂಲಭೂತ ಸೌಕರ್ಯ ಕಲ್ಪಿಸುವಂತೆ ಶಾಸಕ ಎಂ.ವೈ. ಪಾಟೀಲ್‌ಗೆ ಮನವಿ



ಕಲಬುರಗಿ,ಜೂ.15-

ಅಫಜಲಪೂರ ತಾಲೂಕಿನ ಹಸುರಗುಂಡಗಿ ಗ್ರಾಮದ ಸಮಗ್ರ ಅಭಿವೃದ್ಧಿ ಹಾಗೂ ಸಾರ್ವಜನಿಕರ ಮೂಲಭೂತ ಅಗತ್ಯಗಳ ಪೂರೈಕೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಡಾ. ಬಾಬು ಜಗಜೀವನರಾಂ ತರುಣ ಸಂಘದ ಅಧ್ಯಕ್ಷ ರಾಜು ಎಸ್. ಕಟ್ಟಿಮನಿ ಅವರು ಅಫಜಲಪೂರ ಕ್ಷೇತ್ರದ ಶಾಸಕ ಎಂ.ವೈ. ಪಾಟೀಲ್ ಅವರಿಗೆ ಮನವಿ ಸಲ್ಲಿಸಿದರು.

ಗ್ರಾಮದ ಜನಜೀವನಕ್ಕೆ ನೇರವಾಗಿ ಸಂಬಂಧಿಸಿದ ಹಲವು ಸಮಸ್ಯೆಗಳ ಕುರಿತು ಮನವಿಯಲ್ಲಿ ಪ್ರಸ್ತಾಪಿಸಿರುವ ಅವರು, ಮಹಿಳೆಯರಿಗೆ ಸಾರ್ವಜನಿಕ ಶೌಚಾಲಯದ ಕೊರತೆಯಿಂದ ತೀವ್ರ ತೊಂದರೆ ಉಂಟಾಗುತ್ತಿದ್ದು, ಶೀಘ್ರದಲ್ಲೇ ಸುಸಜ್ಜಿತ ಸಾರ್ವಜನಿಕ ಶೌಚಾಲಯ ನಿರ್ಮಾಣಕ್ಕೆ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ.

ಪ್ರತಿ ಶುಕ್ರವಾರ ನಡೆಯುವ ವಾರದ ಸಂತೆಗಾಗಿ ಪ್ರತ್ಯೇಕ ಹಾಗೂ ವಿಶಾಲ ಜಾಗವನ್ನು ಮೀಸಲಿಡುವ ಮೂಲಕ ಸಂಚಾರ ದಟ್ಟಣೆ ಮತ್ತು ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗಳನ್ನು ನಿವಾರಿಸಬೇಕು ಎಂದು ಮನವಿ ಮಾಡಿದ್ದಾರೆ.

ಗ್ರಾಮದ ಆಂತರಿಕ ರಸ್ತೆಗಳು ಹದಗೆಟ್ಟಿದ್ದು, ಸಮರ್ಪಕ ಚರಂಡಿ ವ್ಯವಸ್ಥೆಯ ಕೊರತೆಯಿಂದ ಕೊಳಚೆ ನೀರು ರಸ್ತೆಗಳಲ್ಲಿ ಹರಿಯುತ್ತಿರುವುದರಿಂದ ಸಾರ್ವಜನಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಆದ್ದರಿಂದ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳನ್ನು ತುರ್ತಾಗಿ ಕೈಗೆತ್ತಿಕೊಳ್ಳುವಂತೆ ಒತ್ತಾಯಿಸಿದ್ದಾರೆ.

ಹಸುರಗುಂಡಗಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರ ಕೊರತೆಯಿಂದ ಗ್ರಾಮಸ್ಥರಿಗೆ ಸಮರ್ಪಕ ಆರೋಗ್ಯ ಸೇವೆ ದೊರೆಯುತ್ತಿಲ್ಲ. ಹೀಗಾಗಿ ಪ್ರತಿದಿನ ವೈದ್ಯರ ಹಾಜರಾತಿ ಖಚಿತಪಡಿಸುವುದರ ಜೊತೆಗೆ ಅಗತ್ಯ ವೈದ್ಯಕೀಯ ಸಿಬ್ಬಂದಿಯನ್ನು ನಿಯೋಜಿಸಬೇಕು ಎಂದು ತಿಳಿಸಿದ್ದಾರೆ.

ಗ್ರಾಮದ ಪ್ರಮುಖ ಓಣಿಗಳಲ್ಲಿ ಹೈಮಾಸ್ಟ್ ದೀಪಗಳನ್ನು ಅಳವಡಿಸಿ ಸಾರ್ವಜನಿಕರ ಭದ್ರತೆ ಹಾಗೂ ರಾತ್ರಿ ಸಂಚಾರಕ್ಕೆ ಅನುಕೂಲ ಕಲ್ಪಿಸಬೇಕು. ಜೊತೆಗೆ ಮಾದಿಗರ ಓಣಿಯಲ್ಲಿರುವ ಕುಡಿಯುವ ನೀರಿನ ತೆರೆದ ಬಾವಿಯನ್ನು ದುರಸ್ತಿಗೊಳಿಸಿ ಸಾರ್ವಜನಿಕ ಬಳಕೆಗೆ ಯೋಗ್ಯವಾಗಿಸಬೇಕೆಂದು ಮನವಿ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಚಂದಪ್ಪ ಕಟ್ಟಿಮನಿ, ರಾಜು ಕಟ್ಟಿಮನಿ, ಸಾಗರ ಕಟ್ಟಿಮನಿ, ಶಿವರಾಜಕುಮಾರ, ಸಾಗರ್ ಬಿಟಿ, ಸಾಜನಕುಮಾರ ಸೇರಿದಂತೆ ಹಲವರು ಉಪಸ್ಥಿತರಿದ್ದರು.




## ಕರಾಟೆ ಕ್ಯಾಂಪ್: ವಿದ್ಯಾರ್ಥಿಗಳಿಗೆ ಬ್ಲಾಕ್ ಬೆಲ್ಟ್, ಕಲರ್ ಬೆಲ್ಟ್ ಪ್ರಮಾಣಪತ್ರ ವಿತರಣೆ

ಕಲಬುರಗಿ ,

ಆಳಂದ್ ಚೆಕ್‌ಪೋಸ್ಟ್ ಸಮೀಪದ ಆಶೀರ್ವಾದ ಕಲ್ಯಾಣ ಮಂಟಪದಲ್ಲಿ ಕಲ್ರಿ-ಎನ್-ರಿಯು ಅಕಾಡೆಮಿ ಆಫ್ ಇಂಡಿಯನ್ ಕರಾಟೆ ಹಾಗೂ ಅಜಯಕುಮಾರ್ ಸ್ಪೋರ್ಟ್ಸ್ ಕರಾಟೆ ಅಸೋಸಿಯೇಷನ್ ವತಿಯಿಂದ ವಾರ್ಷಿಕ ತರಬೇತಿ ಶಿಬಿರ (ಅನ್ನುವಲ್ ಟ್ರೈನಿಂಗ್ ಕ್ಯಾಂಪ್), ಬ್ಲಾಕ್ ಬೆಲ್ಟ್ ಹಾಗೂ ಕಲರ್ ಬೆಲ್ಟ್ ಪರೀಕ್ಷೆಯನ್ನು ಆಯೋಜಿಸಲಾಯಿತು.

ಕಾರ್ಯಕ್ರಮಕ್ಕೆ ಬೆಂಗಳೂರಿನಿಂದ ಆಗಮಿಸಿದ್ದ ರೆಡ್ ಬೆಲ್ಟ್ ಗ್ರಾಂಡ್ ಮಾಸ್ಟರ್ ಶ್ರೀನಿವಾಸ್ ಅವರು ವಿದ್ಯಾರ್ಥಿಗಳ ಕರಾಟೆ ಕೌಶಲ್ಯ ಮತ್ತು ಪರೀಕ್ಷೆಯನ್ನು ವೀಕ್ಷಿಸಿ, ಅರ್ಹರಾದ ನಾಲ್ಕು ವಿದ್ಯಾರ್ಥಿಗಳಿಗೆ ಬ್ಲಾಕ್ ಬೆಲ್ಟ್ ಪ್ರದಾನ ಮಾಡಿದರು. ಅಲ್ಲದೇ ಅನೇಕ ವಿದ್ಯಾರ್ಥಿಗಳಿಗೆ ಕಲರ್ ಬೆಲ್ಟ್ ಹಾಗೂ ತರಬೇತಿ ಶಿಬಿರದ ಪ್ರಮಾಣಪತ್ರಗಳನ್ನು ವಿತರಿಸಿ ಅಭಿನಂದಿಸಿದರು.

ಈ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಪೊಲೀಸ್ ಇನ್ಸ್ ಪೆಕ್ಟರ್ (ಸೈಬರ್ ಕ್ರೈಂ) ಬಸವರಾಜ್ ಮಂಜಳಕರ್ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ಕರಾಟೆಯಂತಹ ಶಿಸ್ತುಬದ್ಧ ಕ್ರೀಡೆಗಳು ಆತ್ಮವಿಶ್ವಾಸ, ದೈಹಿಕ ಸಾಮರ್ಥ್ಯ ಮತ್ತು ಮಾನಸಿಕ ದೃಢತೆಯನ್ನು ಬೆಳೆಸುತ್ತವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಮುಖ್ಯ ಕೋಚ್ ರಾಜವರ್ಧನ್ ಜಿ. ಚೌಹಾಣ್, ದಾದಾಸಾಹೇಬ್, ಶ್ರೀಕಾಂತ್ ಪಿಸಾಳ್, ಪ್ರತಾಪ್ ಸಿಂಗ್ ಪವಾರ್, ಅಂಬರೀಶ್ ಎನ್., ಅನಿಲಕುಮಾರ್, ತುಲಜಮ್ಮ ಕಟ್ಟಿಮನಿ ಸೇರಿದಂತೆ ಪಾಲಕರು, ಪೋಷಕರು ಹಾಗೂ ಕರಾಟೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಶಿಬಿರದಲ್ಲಿ ವಿದ್ಯಾರ್ಥಿಗಳು ವಿವಿಧ ಕರಾಟೆ ಕೌಶಲ್ಯಗಳ ಪ್ರದರ್ಶನ ನೀಡಿದ್ದು, ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು.

**ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ**

## ಹಿರಿಯರ ಶೋಷಣೆ ತಡೆಯಲು ಕಾನೂನು ಜಾಗೃತಿ ಅಗತ್ಯ - ಸಿದ್ಧರಾಮಪ್ಪ ಕಲ್ಯಾಣರಾವ್

2007 ಹಿರಿಯ ನಾಗರಿಕರ ಹಕ್ಕುಗಳ ರಕ್ಷಣೆಗೆ ಮಹತ್ವದ ಕಾನೂನು ಎಂದು ಅವರು ತಿಳಿಸಿದರು. ಹಿಂದೆ ಪಾಲನೆ ಪೋಷಣೆ ಸಂಬಂಧಿತ ಪ್ರಕರಣಗಳು ನ್ಯಾಯಾಲಯಗಳಲ್ಲಿ ದೀರ್ಘಕಾಲ ಬಾಕಿ ಉಳಿಯುತ್ತಿದ್ದ ಹಿನ್ನೆಲೆ ಈ ವಿಶೇಷ ಕಾಯ್ದೆ ಜಾರಿಗೊಳಿಸಲಾಗಿದೆ ಎಂದು ಹೇಳಿದರು.

ಮಕ್ಕಳು ಅಥವಾ ವಾರಸು ದಾರರು ಹಿರಿಯ ನಾಗರಿಕರ ಪಾಲನೆ ಮಾಡದಿದ್ದಲ್ಲಿ, ಸಂಬಂಧಿತ ಸಹಾ ಯಕ ಆಯುಕ್ತರ ಕಚೇರಿಗೆ ಅರ್ಜಿ ಸಲ್ಲಿಸುವ ಅವಕಾಶವಿದ್ದು, ಅಂತಹ ಅರ್ಜಿಗಳನ್ನು ಸಾಮಾನ್ಯವಾಗಿ 60 ದಿನಗಳೊಳಗೆ ಹಾಗೂ ವಿಶೇಷ ಸಂದರ್ಭಗಳಲ್ಲಿ 90 ದಿನಗಳೊಳಗೆ ವಿಲೇವಾರಿ ಮಾಡುವ ವ್ಯವಸ್ಥೆ ಇದೆ ಎಂದು ವಿವರಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ಸಹಾಯಕ ಆಯುಕ್ತ ಹಂಪಣ್ಣ ಸಜ್ಜನ್ ಮಾತನಾಡಿ, ಜಾಗತಿಕ ಮಟ್ಟದಲ್ಲಿ ಹಿರಿಯ ನಾಗರಿಕರ ಮೇಲಿನ ಶೋಷಣೆ ಮತ್ತು ನಿರ್ಲಕ್ಷ್ಯದ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಜಾಗೃತಿ ಕಾರ್ಯಕ್ರಮಗಳು ಅವಶ್ಯಕವಾಗಿವೆ ಎಂದರು. 60 ವರ್ಷ ಮೇಲ್ಪಟ್ಟವರನ್ನು ಹಿರಿಯ ನಾಗರಿಕರೆಂದು ಪರಿಗಣಿಸಲಾಗುತ್ತಿದ್ದು, ಅವರ ಆಸ್ತಿಯನ್ನು ಬಳಸಿಕೊಂಡು ಪಾಲನೆ ಮಾಡದಿದ್ದರೆ ಕಾನೂನು ಸೇವಾ ಪ್ರಾಧಿಕಾರ ಮತ್ತು ಹಿರಿಯ ನಾಗರಿಕರ ಸಹಾಯವಾಣಿ ಮೂಲಕ ನೆರವು ಪಡೆಯಬಹುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ನಾಗರಿಕರ ಹಕ್ಕುಗಳು, ಕಾನೂನು ನೆರವು, ಸಹಾಯವಾಣಿ ಸೇವೆಗಳು ಹಾಗೂ ಕುಟುಂಬ ಸದಸ್ಯರ ಜವಾಬ್ದಾರಿಗಳ ಕುರಿತು ಜಾಗೃತಿ ಮೂಡಿಸಲಾಯಿತು. ಹಿರಿಯ ನಾಗರಿಕರಿಗೆ ಗೌರವಯುತ ಜೀವನ ಮತ್ತು ಸಾಮಾಜಿಕ ಭದ್ರತೆ ಕಲ್ಪಿಸುವುದು ಪ್ರತಿಯೊಬ್ಬರ ಸಾಮಾಜಿಕ ಜವಾಬ್ದಾರಿ ಎಂದು ವಕ್ತಾರರು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಶರಣಮ್ಮ, ಎಸ್. ಸರಸ್ವತಿ, ಪವನ್ ಕಿಶೋರ್ ಪಾಟೀಲ್, ಲಕ್ಷ್ಮೀಕಾಂತ್ ರೆಡ್ಡಿ, ಭಾಸ್ಕರ್ ಬಾಬು ಹಾಗೂ ವೀರಭದ್ರಪ್ಪ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸಾಮಾಜಿಕ ಕಾರ್ಯಕರ್ತರು ಮತ್ತು ಹಿರಿಯ ನಾಗರಿಕರು ಉಪಸ್ಥಿತರಿದ್ದರು.



## ಪರಿಶಿಷ್ಟ ಕಾಲೋನಿಯಲ್ಲಿ ದಲಿತರ ಕುಂದುಕೊರತೆ ಸಭೆ

ಕನಕಗಿರಿ,

ಪಟ್ಟಣದ 8ನೇ ವಾರ್ಡ್‌ನ ಅಂಬೇಡ್ಕರ್ ವೃತ್ತದ ಬಳಿ ಪಿಐ ವಿ. ನಾರಾಯಣ ಅವರ ನೇತೃತ್ವದಲ್ಲಿ ಪೊಲೀಸ್ ಇಲಾಖೆ ವತಿಯಿಂದ ದಲಿತರ ಕುಂದುಕೊರತೆ ಸಭೆ ರವಿವಾರ ಹಮ್ಮಿಕೊಳ್ಳಲಾಯಿತು.

ಕನಕಗಿರಿ ಪರಿಶಿಷ್ಟ ಮೀಸಲು ಕ್ಷೇತ್ರವಾಗಿದ್ದು, ಪರಿಶಿಷ್ಟ ಜಾತಿ ಮತ್ತು ಪಂಗಡದ ಅನೇಕ ಕಾಲೋನಿಗಳಿವೆ. ಹೀಗಾಗಿ ದಲಿತರ ಸಭೆ ಏರ್ಪಡಿಸಿ ಅವರ ಸಮಸ್ಯೆಗಳನ್ನು ಆಲಿಸುವುದು ಬಹಳ ಮುಖ್ಯವಾಗಿದೆ ಎಂದರು.

ಯುವ ಮುಂದಾಳು ನೀಲಕಂಠ ಬಡಿಗೇರ್ ಮಾತನಾಡಿ, ನಮ್ಮ ವಾರ್ಡ್ ಅತ್ಯಂತ ಹಿಂದುಳಿದಿದ್ದು, ಅತಿ ಹೆಚ್ಚು ಪರಿಶಿಷ್ಟ ಜಾತಿ ಸಮುದಾಯಗಳಿವೆ. ಇಲ್ಲಿ ಅನೇಕ ಸಮಸ್ಯೆಗಳಿವೆ. ಹಳ್ಳಿಗಳಲ್ಲಿ ಇಂದಿಗೂ ಜಾತಿ ವ್ಯವಸ್ಥೆ ಜೀವಂತವಾಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೇಲೆ ಜಾತಿ ದೌರ್ಜನ್ಯಗಳು ನಡೆಯುತ್ತಿವೆ. ಜೂಜು, ಮಟ್ಕಾ, ಇಸ್ಪೀಟ್, ಮದ್ಯಪಾನ, ಕಳ್ಳತನದಂತಹ ಅಕ್ರಮ ಚಟುವಟಿಕೆಗಳು ಎಗ್ಗಿಲ್ಲದೆ ನಡೆಯುತ್ತಿವೆ. ಇವುಗಳನ್ನು ಕೂಡಲೇ ತಡೆಗಟ್ಟಬೇಕು ಎಂದು ಆಗ್ರಹಿಸಿದರು.

ದಲಿತರ ಸಮಸ್ಯೆಗಳಿಗೆ ಪೊಲೀಸ್ ಇಲಾಖೆ ತಕ್ಷಣ ಸ್ಪಂದಿಸಬೇಕು. ವಿದ್ಯಾವಂತ ಯುವಕರು ಹೆಚ್ಚಾಗಿದ್ದು, ಹೈಟೆಕ್ ಗ್ರಂಥಾಲಯದ ಅವಶ್ಯಕತೆ ಇದೆ ಎಂದರು.

ಈ ವೇಳೆ ಪಿಎಸ್‌ಐ ಉಮೇಶ, ಪೊಲೀಸ್ ಪೇದೆ ಬೈಲಾಪ್ಪ, ಲೋಹಿತ್, ಪ್ರಮುಖರಾದ ಪರಸಪ್ಪ ಗುಂಡೂರು, ಪಾಂಡಪ್ಪ, ಕನಕಪ್ಪ ಮ್ಯಾಗಡೇ, ಹನುಮಂತಪ್ಪ, ಕಂಠಿರಂಗ ಚುಲುವಾದಿ, ಅಮರೇಶ, ಮಲ್ಲಯ್ಯ ಇತರರು ಉಪಸ್ಥಿತರಿದ್ದರು.

## ಭೂ ಪರಿಹಾರ ನೀಡುವಲ್ಲಿ ವಿಳಂಬ, ಲಂಚ ಕೇಳಿದ ಆರೋಪ; ಸರಕಾರಿ ನೌಕರನಿಗೆ ರೈತನಿಂದ ಚಪ್ಪಲಿ ಏಟು



ಬಾಗಲಕೋಟೆ,ಜೂ.15-

ಭೂ ಪರಿಹಾರ ನೀಡುವಲ್ಲಿ ವಿಳಂಬ ಹಾಗೂ ಲಂಚ ಕೇಳಿದ್ದಾರೆ ಎಂದು ಆರೋಪಿಸಿ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಕಚೇರಿಯಲ್ಲಿನ ಅಧಿಕಾರಿಯೊಬ್ಬರಿಗೆ ಸಂತ್ರಸ್ತ ರೈತ ಚಪ್ಪಲಿ ಏಟು ನೀಡಿದ ಘಟನೆ ಶನಿವಾರ ನಡೆದಿದೆ.

ಸಂತ್ರಸ್ತ ರೈತ ಬಸಪ್ಪ ಎಂಬಾತನ ಜಮೀನು ಸ್ವಾಧೀನಪಡಿಸಿಕೊಂಡು ಭೂ ಪರಿಹಾರ ನೀಡುವಲ್ಲಿ ವಿಳಂಬ ಮಾಡುತ್ತಿರುವುದನ್ನು ಕಂಡು ಆಕ್ರೋಶಗೊಂಡಿರುವ ರೈತ ಪದೇ ಪದೇ ಬಿಟಿಡಿಎ ಕಚೇರಿಗೆ ಹೋದರೂ ತನ್ನ ಕೆಲಸ ಆಗದೇ ಇದ್ದಾಗ ಬಿಟಿಡಿಎ ಕಚೇರಿಯ ಪ್ರಥಮ ದರ್ಜೆ ನೌಕರ ಅಂಕದ ಎಂಬಾತನಿಗೆ ಚಪ್ಪಲಿ ಏಟು ಬಿದ್ದಿದ್ದು, ಈ ಕುರಿತ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ.

ರೈತ ಬಸಪ್ಪ ಅಧಿಕಾರಿಯ ಬಟ್ಟೆ ಹಿಡಿದು ಕೂಡ ಎಳೆದಾಡಿದ ಘಟನೆ ನಡೆಯುತ್ತಿದ್ದಂತೆ ಅಧಿಕಾರಿ ರೈತನಿಗೆ ಹೆದರಿ ಪಕ್ಕದ ಕೊಠಡಿಗೆ ಹೋದ ಪ್ರಸಂಗ ನಡೆಯಿತು.

ಈ ಕುರಿತು ಸಮಸ್ಯೆ ಆಲಿಸಿದ ಬಿಟಿಡಿಎ ಅಧ್ಯಕ್ಷ ಪ್ರಕಾಶ ತಪಶೆಟ್ಟಿ, ಬಿಟಿಡಿಎ ಕಚೇರಿಗೆ ಬರುವ ಸಂತ್ರಸ್ತರ ಸಮಸ್ಯೆಗೆ ಅಧಿಕಾರಿಗಳು ಸ್ಪಂದಿಸಬೇಕು.ಸಮಸ್ಯೆಗೆ ಪರಿಹಾರ ಸಿಗದೇ ಇದ್ದಾಗ ಅದಕ್ಕೆ ಅಧಿಕಾರಿಗಳು ಹಿಂಬರಹ ಕೊಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಇಂತಹ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ವಹಿಸಲಾಗುವುದು ಎಂದು ದಲಿತ ಸಂಘಟನೆಗಳ ಮುಖಂಡರಿಗೆ ಸಮಾಧನಪಡಿಸಿ ಕಳುಹಿಸಿ, ಗದ್ದಲವನ್ನು ತಿಳಿಗೊಳಿಸಿದರು.

## ಕೃಷ್ಣಾ ನದಿ ಪಾತ್ರದಲ್ಲಿ ಅಕ್ರಮ ಮರಳು ಗಣಿಗಾರಿಕೆ ಆರೋಪ: ಹಿಟಾಚಿ, ಜೆಸಿಬಿ ಯಂತ್ರ ಜಪ್ತಿ, ಪ್ರಕರಣ ದಾಖಲು

ಯಾದಗಿರಿ,ಜೂ.14-

ಜಿಲ್ಲೆಯ ಸುರಪುರ ತಾಲೂಕಿನ ಹೆಮ್ಮಡಗಿ ಹಾಗೂ ಅಡ್ಡೊಡಗಿ ಗ್ರಾಮಗಳ ವ್ಯಾಪ್ತಿಯ ಕೃಷ್ಣಾ ನದಿ ಪಾತ್ರದಲ್ಲಿ ಅಕ್ರಮವಾಗಿ ಮರಳು ಗಣಿಗಾರಿಕೆ ನಡೆಸುತ್ತಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಗಣಿಗಾರಿಕೆಗೆ ಬಳಸಲಾಗುತ್ತಿದ್ದ ಎಂಟು ಹಿಟಾಚಿ ಮತ್ತು ಜೆಸಿಬಿ ಯಂತ್ರಗಳನ್ನು ಜಪ್ತಿ ಮಾಡಿ ಪ್ರಕರಣ ದಾಖಲಿಸಲಾಗಿದೆ ಎಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಉಪನಿರ್ದೇಶಕ ವಿರೇಶ ತಿಳಿಸಿದ್ದಾರೆ.

ಜಿಲ್ಲೆಯ ಸುರಪುರ, ಶಹಾಪುರ, ವಡಗೇರಾ ಸೇರಿದಂತೆ ವಿವಿಧ ತಾಲೂಕುಗಳಲ್ಲಿ ಅಕ್ರಮ ಮರಳು, ಮುರಂ ಹಾಗೂ ಇತರೆ ಉಪಖನಿಜಗಳ ಗಣಿಗಾರಿಕೆ, ದಾಸ್ತಾನು ಮತ್ತು ಸಾಗಾಣಿಕೆ ನಡೆಯುತ್ತಿರುವ ಬಗ್ಗೆ ಇಲಾಖೆ ನಿರಂತರವಾಗಿ ದೂರುಗಳನ್ನು ಸ್ವೀಕರಿಸುತ್ತಿದೆ.

ಈ ಹಿನ್ನೆಲೆಯಲ್ಲಿ ಅಕ್ರಮ ಚಟುವಟಿಕೆಗಳಲ್ಲಿ ತೊಡಗಿರುವ ವ್ಯಕ್ತಿಗಳು, ವಾಹನಗಳು ಹಾಗೂ ಯಂತ್ರೋಪಕರಣಗಳನ್ನು ಜಪ್ತಿ ಮಾಡಿ ಕಾನೂನು ಕ್ರಮ ಕೈಗೊಳ್ಳುವಂತೆ ಜಿಲ್ಲಾ ಮತ್ತು ತಾಲೂಕು ಮಟ್ಟದ ಮರಳು ಉಸ್ತುವಾರಿ ಸಮಿತಿಗಳಿಗೆ ಜಿಲ್ಲಾಧಿಕಾರಿಗಳು ಈಗಾಗಲೇ ಸೂಚನೆ ನೀಡಿದ್ದರು.

ಜೂನ್ 12ರಂದು ಹೆಮ್ಮಡಗಿ ಮತ್ತು ಅಡ್ಡೊಡಗಿ ಗ್ರಾಮಗಳ ವ್ಯಾಪ್ತಿಯ ಕೃಷ್ಣಾ ನದಿ ಪಾತ್ರದಲ್ಲಿ ಹಿಟಾಚಿ ಹಾಗೂ ಜೆಸಿಬಿ ಯಂತ್ರಗಳ ಮೂಲಕ ಅಕ್ರಮ ಮರಳು ಗಣಿಗಾರಿಕೆ ನಡೆಯುತ್ತಿರುವ ಬಗ್ಗೆ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಅಧಿಕಾರಿಗಳು ದಾಳಿ ನಡೆಸಿದರು. ಈ ವೇಳೆ ಅಕ್ರಮ ಗಣಿಗಾರಿಕೆಗೆ ಬಳಸಲಾಗುತ್ತಿದ್ದ ಎಂಟು ಯಂತ್ರಗಳನ್ನು ವಶಕ್ಕೆ ಪಡೆದು ಸುರಪುರ ಪೊಲೀಸ್ ಠಾಣೆಗೆ ಒಪ್ಪಿಸಲಾಗಿದೆ.

ಈ ಸಂಬಂಧ ಸುರಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ಸಂಖ್ಯೆ 0150/2026 ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಳ್ಳಲಾಗಿದೆ.

ಜಿಲ್ಲೆಯಲ್ಲಿ ಅಕ್ರಮ ಮರಳು ಮತ್ತು ಉಪಖನಿಜಗಳ ಗಣಿಗಾರಿಕೆ, ದಾಸ್ತಾನು ಹಾಗೂ ಸಾಗಾಣಿಕೆಯನ್ನು ತಡೆಗಟ್ಟುವಲ್ಲಿ ಜಿಲ್ಲಾ ಮತ್ತು ತಾಲೂಕು ಮಟ್ಟದ ಮರಳು ಉಸ್ತುವಾರಿ ಸಮಿತಿಗಳು ವಿಫಲವಾದಲ್ಲಿ, ಸಂಬಂಧಪಟ್ಟ ಸದಸ್ಯರನ್ನೇ ನೇರ ಹೊಣೆಗಾರರನ್ನಾಗಿ ಪರಿಗಣಿಸಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿಗಳು ಕಟ್ಟುನಿಟ್ಟಿನ ಸೂಚನೆ ನೀಡಿರುವುದಾಗಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ನಿಮ್ಮೂರು ಸುದ್ದಿ

## ಸಂಪಾದಕೀಯ

# ಗ್ಯಾರಂಟಿ ಯೋಜನೆ ಫಲಾನುಭವಿಗಳ ಪರಿಷ್ಕರಣೆ ಅಗತ್ಯ, ಅನಿವಾರ್ಯ

ನೂತನ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರು ಗ್ಯಾರಂಟಿ ಯೋಜನೆಗಳ ಬಗ್ಗೆ ತೆಗೆದುಕೊಳ್ಳುವ ನಿರ್ಧಾರಕ್ಕಾಗಿ ವಿರೋಧ ಪಕ್ಷಗಳು ತುದಿಗಾಲಲ್ಲಿ ನಿಂತು ಕಾಯುತ್ತಿವೆ. ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಸಿದ್ದರಾಮಯ್ಯ ಪಾತ್ರ ಮುಖ್ಯವಾಗಿದ್ದು, ಡಿಕೆಶಿ ಮುಖ್ಯಮಂತ್ರಿಯಾದರೆ ಗ್ಯಾರಂಟಿ ಯೋಜನೆಗಳಿಗೆ ಕತ್ತರಿ ಬೀಳುತ್ತದೆ ಎನ್ನುವ ವದಂತಿಗಳು ಮಾಧ್ಯಮಗಳಲ್ಲಿ ಈ ಹಿಂದೆಯೇ ಹರಿದಾಡುತ್ತಿದ್ದವು. ಗ್ಯಾರಂಟಿ ಯೋಜನೆಗಳನ್ನು ನೂತನ ಮುಖ್ಯಮಂತ್ರಿ ರದ್ದು ಪಡಿಸಿದರೆ ಅದನ್ನೇ ಮುಂದಿಟ್ಟುಕೊಂಡು ವಿರೋಧ ಪಕ್ಷಗಳು ಗದ್ದಲ ಎಬ್ಬಿಸಲಿವೆ. ಮತದಾರರಿಗೆ ಮಾತುಕೊಟ್ಟು ಸರಕಾರ ವಂಚಿಸಿದೆ ಎಂದು ಬೀದಿಗಿಳಿಯುತ್ತವೆ. ಗ್ಯಾರಂಟಿ ಯೋಜನೆಗಳನ್ನು ರದ್ದು ಪಡಿಸದೇ ಇದ್ದರೆ ಅಭಿವೃದ್ಧಿ ಯೋಜನೆಗಳಿಗೆ ಹಣ ಸಾಕಾಗುತ್ತಿಲ್ಲ, ಸರಕಾರ ದಿವಾಳಿಯಾಗಿದೆ ಎಂದು ಗದ್ದಲ ಎಬ್ಬಿಸುತ್ತವೆ. ಅಧಿಕಾರಕ್ಕೇರಿದ ಬೆನ್ನಿಗೇ ಡಿಕೆಶಿಯವರು ಶಕ್ತಿಯೋಜನೆಗೆ ಕತ್ತರಿ ಹಾಕುವ ಬದಲು ಉಚಿತ ಬಸ್ ಪ್ರಯಾಣವನ್ನು ಇತರ ವಿದ್ಯಾರ್ಥಿಗಳಿಗೂ ವಿಸ್ತರಿಸಿ ವಿರೋಧ ಪಕ್ಷದ ನಾಯಕರ ಬಾಯಿ ಮುಚ್ಚಿಸಿದರು. ಇದೀಗ ಗೃಹ ಲಕ್ಷ್ಮಿ ಯೋಜನೆಯಲ್ಲಿ ಅರ್ಹ ಫಲಾನುಭವಿಗಳನ್ನು ಗುರುತಿಸುವುದಕ್ಕಾಗಿ ಸರಕಾರ ಪರಿಷ್ಕರಣೆಗೆ ಮುಂದಾಗಿದ್ದೇ ತಡ, ವಿರೋಧ ಪಕ್ಷದ ನಾಯಕರು ಹಾಹಾಕಾರ ಎಬ್ಬಿಸ ತೊಡಗಿದ್ದಾರೆ. ಇನ್ನೂ ಪರಿಷ್ಕರಣೆಯ ಪ್ರಕ್ರಿಯೆ ಪೂರ್ಣಗೊಂಡಿಲ್ಲ, ಅಷ್ಟರಲ್ಲೇ ವಿರೋಧ ಪಕ್ಷದ ನಾಯಕರಾಗಿರುವ ಆರ್. ಅಶೋಕ್ ಅವರು ಗೃಹ ಲಕ್ಷ್ಮಿ ಈಗ ಅನರ್ಹ ಲಕ್ಷ್ಮಿ ಎಂದು ವ್ಯಂಗ್ಯವಾಡಿದ್ದಾರೆ. ಗ್ಯಾರಂಟಿ ಯೋಜನೆಯ ಮೂಲಕ ಹಣವನ್ನು ಪೋಲು ಮಾಡುತ್ತಿದೆ ಎಂದು ಆರೋಪಿಸಿದವರೇ ಇದೀಗ, 17 ಜಿಲ್ಲೆಗಳಲ್ಲಿ ಒಂದು ಲಕ್ಷಕ್ಕೂ ಅಧಿಕ ಮಹಿಳೆಯರನ್ನು ಗೃಹ ಲಕ್ಷ್ಮಿಯಿಂದ ಸರಕಾರ ಹೊರದಬ್ಬಲು ಯತ್ನಿಸುತ್ತಿದೆ ಎಂದು ಟೀಕಿಸುತ್ತಿದ್ದಾರೆ.

ಗೃಹ ಲಕ್ಷ್ಮಿ ಯೋಜನೆಗಳನ್ನು ರದ್ದುಗೊಳಿಸುವುದಾಗಿ ಸರಕಾರ ಎಲ್ಲೂ ಹೇಳಿಲ್ಲ. ಗ್ಯಾರಂಟಿ ಯೋಜನೆಗಳು ಎಂದಲ್ಲ, ಯಾವುದೇ ಯೋಜನೆಗಳು ದುರ್ಬಳಕೆಯಾಗಬಾರದು. ಪರಿಷ್ಕರಣೆ ನಡೆಸಿ ಯೋಜನೆಗಳನ್ನು ಅನರ್ಹರು ಕಿತ್ತುಕೊಂಡಿದ್ದರೆ ಅದನ್ನು ಸರಿಪಡಿಸಿ ಅರ್ಹರಿಗೆ ತಲುಪಿಸುವುದು ಸರಕಾರದ ಕರ್ತವ್ಯ. ಇತ್ತೀಚೆಗೆ ಅಕ್ರಮ ಬಿಪಿಎಲ್ ಕಾರ್ಡ್‌ದಾರರನ್ನು ಗುರುತಿಸಿ ಅವರನ್ನು ಹೊರಗಿಡುವ ಕೆಲಸವನ್ನು ಸರಕಾರ ಮಾಡಿದೆ. ಈ ಸಂದರ್ಭದಲ್ಲಿ ಕೆಲವು ಅಧ್ವಾನಗಳು ನಡೆದು ಅರ್ಹ ಕಾರ್ಡ್‌ದಾರರನ್ನು ಹೊರಗಿಟ್ಟ ಪ್ರಸಂಗವೂ ನಡೆದಿದೆಯಾದರೂ ಪರಿಷ್ಕರಣೆಯಂತೂ ನಡೆಯಲೇ ಬೇಕಾದ ಕೆಲಸವಾಗಿತ್ತು. ಗ್ಯಾರಂಟಿ ಯೋಜನೆಗಳು ಆತುರಾತುರವಾಗಿ ಜಾರಿಗೆ ಬಂದಿರುವುದರಿಂದ ಈ ಮೂರು ವರ್ಷಗಳಲ್ಲಿ ಅದರ ಸಾಧಕ ಬಾಧಕಗಳನ್ನು ಗುರುತಿಸುವ ಕೆಲಸ ನಡೆಯಲೇ ಬೇಕು. ಈಗಾಗಲೇ ಮೃತಪಟ್ಟವರ ಹೆಸರಿನಲ್ಲಿ, ಅನರ್ಹರ ಹೆಸರಿನಲ್ಲಿ ಗೃಹ ಲಕ್ಷ್ಮಿ ಯೋಜನೆಗಳ ಲಾಭವನ್ನು ಕೆಲವರು ಪಡೆಯುತ್ತಿರುವ ಆರೋಪಗಳು ಕೇಳಿ ಬಂದಿದ್ದು ಪರಿಷ್ಕರಣೆಯ ಮೂಲಕ ಅರ್ಹರನ್ನು ಗುರುತಿಸುವ ಕೆಲಸವನ್ನು ನಡೆಸುವುದು ಅನಿವಾರ್ಯ. ಈ ಕಾರಣದಿಂದಲೇ ಪರಿಷ್ಕರಣೆಯ ಕೆಲಸಕ್ಕೆ ಸರಕಾರ ಇಳಿದಿದೆ. ಇದನ್ನೇ ಮುಂದಿಟ್ಟುಕೊಂಡು, ಸರಕಾರ ಗೃಹ ಲಕ್ಷ್ಮಿ ಯೋಜನೆಯನ್ನೇ ರದ್ದುಪಡಿಸಲು ಮುಂದಾಗಿದೆ ಎಂದು ಗುಲ್ಲೆಬ್ಬಿಸಲು ಮುಂದಾಗುವುದು ನ್ಯಾಯವಲ್ಲ. ಸರಕಾರ ಗೃಹ ಲಕ್ಷ್ಮಿ ಯೋಜನೆಯನ್ನು ರದ್ದುಗೊಳಿಸಬೇಕು ಎನ್ನುವ ತಮ್ಮ ಮನದಿಂಗಿತವನ್ನು ಈ ರೀತಿಯಲ್ಲಿ ವಿರೋಧ ಪಕ್ಷ ವ್ಯಕ್ತಪಡಿಸುತ್ತಿದೆ. ಗೃಹಲಕ್ಷ್ಮಿ ಯೋಜನೆಯಿಂದ ಅನರ್ಹರನ್ನು ಕಿತ್ತು ಹಾಕಿದರೆ ಬಿಜೆಪಿಗೆ ಸಮಸ್ಯೆ ಏನು ಎನ್ನುವುದನ್ನು ಅವರು ಇನ್ನೂ ವಿವರಿಸಿಲ್ಲ.

ಸಿಲಿಂಡರ್ ಸಬ್ಸಿಡಿಯಿಂದ ಜನರನ್ನು ಹಂತ ಹಂತವಾಗಿ ಹೇಗೆ ಕೇಂದ್ರ ಸರಕಾರ ಹೊರಗಿಟ್ಟಿತು ಎನ್ನುವುದನ್ನು ನಾವು ನೋಡಿದ್ದೇವೆ. ಇತ್ತೀಚೆಗಷ್ಟೇ ಉಜ್ವಲ ಯೋಜನೆಯ ಪ್ರಯೋಜನ ಪಡೆಯುತ್ತಿದ್ದ ಮಹಿಳೆಯರ ಸಿಲಿಂಡರ್‌ಗಳನ್ನು ಕಡಿತಗೊಳಿಸಿತು. ಈ ಸಂದರ್ಭದಲ್ಲಿ ರಾಜ್ಯದ ನಾಯಕರು ಬಾಯಿ ಹೊಲಿದು ಕುಳಿತಿದ್ದರು. ಉಜ್ವಲ ಯೋಜನೆಯ ಹೆಸರಿನಲ್ಲಿ ಬೀದಿ ಬೀದಿಯಲ್ಲಿ ಪ್ರಧಾನಿ ಮೋದಿಯ ಭಾವಚಿತ್ರದ ಜೊತೆಗೆ ಜಾಹೀರಾತು ಕಟೌಟ್‌ಗಳನ್ನು ನಿಲ್ಲಿಸಿ ಪ್ರಚಾರ ಗಿಟ್ಟಿಸಿಕೊಂಡ ಕೇಂದ್ರ ಸರಕಾರ ಇದೀಗ ಕೊಟ್ಟ ಮಾತಿನಿಂದ ಹಿಂದೆ ಸರಿಯುತ್ತಿದೆ. ಉಜ್ವಲ ಫಲಾನುಭವಿಗಳ ಸಬ್ಸಿಡಿ ಎಲ್‌ಪಿಜಿ ಕೋಟಾವನ್ನು ಕೇಂದ್ರ ಸರಕಾರ 9ರಿಂದ ನಾಲ್ಕಕ್ಕಿಳಿಸಿದೆ. ಇದರಿಂದ ದೇಶಾದ್ಯಂತ ಕೋಟ್ಯಂತರ ಮಹಿಳೆಯರು ಸಮಸ್ಯೆಗಳನ್ನು ಎದುರಿಸತೊಡಗಿದ್ದಾರೆ. ಇದರ ವಿರುದ್ಧ ಬಿಜೆಪಿ ನಾಯಕರು ಮಾತನಾಡಬೇಕಾಗಿತ್ತು. ರಾಜ್ಯದ ಸಂತ್ರಸ್ತ ಮಹಿಳೆಯರ ಅಳಲನ್ನು ಕೇಂದ್ರಕ್ಕೆ ತಲುಪಿಸಬೇಕಾಗಿತ್ತು. ಆದರೆ ಅದನ್ನು ಕಂಡೂ ಕಾಣದಂತಿದ್ದಾರೆ.

ಇಡೀ ದೇಶದಲ್ಲಿ ತೀವ್ರ ಪರಿಷ್ಕರಣೆಯ ಹೆಸರಿನಲ್ಲಿ ಜನರನ್ನು ಮತದಾರರ ಪಟ್ಟಿಯಿಂದಲೇ ಹೊರಹಾಕಲಾಗುತ್ತಿದೆ. ಮೂಲಭೂತ ಹಕ್ಕಾಗಿರುವ ಮತದಾನದಿಂದ ಕೋಟ್ಯಂತರ ಜನರು ವಂಚಿತರಾಗುತ್ತಿದ್ದಾರೆ. ಇದರ ವಿರುದ್ಧ ದೇಶಾದ್ಯಂತ ಜನರು ಹೋರಾಟ ನಡೆಸುತ್ತಿದ್ದಾರೆ. ಮತದಾರರ ಪಟ್ಟಿ ಪರಿಷ್ಕರಣೆಯ ಬಳಿಕ ಹೊರಗುಳಿದ ಸುಮಾರು 6 ಕೋಟಿಗೂ ಅಧಿಕ ಮತದಾರರು ನುಸುಳುಕೋರರು ಆಗಿರುವುದಕ್ಕಂತೂ ಸಾಧ್ಯವಿಲ್ಲ. ಆದರೆ ಕೇಂದ್ರ ಸರಕಾರದ ಕೃಪೆಯಿಂದ ಮತದಾನ ಮಾಡುವ ಹಕ್ಕಿನಿಂದ ಇವರೆಲ್ಲರೂ ವಂಚಿತರಾಗಿದ್ದಾರೆ. ಅಷ್ಟೇ ಅಲ್ಲ, ಈ ಪರಿಷ್ಕರಣೆಯಲ್ಲಿ ಹೊರಗುಳಿದ ಜನರು ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಸರಕಾರದ ಎಲ್ಲ ಯೋಜನೆಗಳಿಂದ ವಂಚಿತರಾಗುತ್ತಿದ್ದಾರೆ. ಪಶ್ಚಿಮಬಂಗಾಳ ಮತ್ತು ಬಿಹಾರ ಸರಕಾರ ಎಸ್‌ಐಆರ್‌ನಲ್ಲಿ ಹೆಸರಿಲ್ಲದವರಿಗೆ ಸರಕಾರದ ಯಾವುದೇ ಯೋಜನೆಗಳನ್ನು ನೀಡಲಾಗುವುದಿಲ್ಲ ಎಂದು ಸ್ಪಷ್ಟಪಡಿಸಿವೆ. ಎಸ್‌ಐರ್ಆ ಪೂರ್ತಿಯಾದರೆ ದೇಶಾದ್ಯಂತ ಕೋಟ್ಯಂತರ ಜನರು ಸರಕಾರದ ಕಲ್ಯಾಣ ಯೋಜನೆಗಳಿಂದ ಹೊರದಬ್ಬಲ್ಪಡುತ್ತಾರೆ. ನಿಜಕ್ಕೂ ಜನರ ಬಗ್ಗೆ, ಬಡವರ ಬಗ್ಗೆ ಬಿಜೆಪಿ ನಾಯಕರಿಗೆ ಕಾಳಜಿಯಿದೆಯಾದರೆ ಅವರು ಮತದಾರರ ಪಟ್ಟಿ ಪರಿಷ್ಕರಣೆಯ ವಿರುದ್ಧ ಮೊದಲು ಧ್ವನಿಯೆತ್ತಬೇಕು. ಆ ಬಳಿಕ, ಗೃಹ ಲಕ್ಷ್ಮಿ ಯೋಜನೆಯ ಪರಿಷ್ಕರಣೆಯ ಬಗ್ಗೆ ತಮ್ಮ ಆಕ್ಷೇಪ ವ್ಯಕ್ತಪಡಿಸಬಹುದಾಗಿದೆ.

ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳ ಸಾಧಕ ಬಾಧಕಗಳ ಅವಲೋಕನ ನಡೆಯುವುದು ಅತ್ಯಗತ್ಯವಾಗಿದೆ. ಈ ಯೋಜನೆಗಳು ದುರುಪಯೋಗವಾದಷ್ಟೂ ಅದರಿಂದ ಅರ್ಹ ಫಲಾನುಭವಿಗಳಿಗೆ ಸಮಸ್ಯೆಯಾಗುತ್ತದೆ. ಆದುದರಿಂದ ಅನರ್ಹ ಫಲಾನುಭವಿಗಳನ್ನು ಗುರುತಿಸಿ ಅವರನ್ನು ಹೊರಹಾಕುವ ಕೆಲಸ ಅಗತ್ಯವಾಗಿ ನಡೆಯಬೇಕಾಗಿದೆ. ಹಾಗೆಯೇ ಈ ಗ್ಯಾರಂಟಿಗಳನ್ನು ಇನಷ್ಟು ಪರಿಣಾಮಕಾರಿಯಾಗಿ, ಪಾರದರ್ಶಕವಾಗಿ ಹೇಗೆ ಅನುಷ್ಠಾನಗೊಳಿಸಬಹುದು ಎನ್ನುವುದರ ಬಗ್ಗೆಯೂ ಸರಕಾರ ಯೋಚಿಸಬೇಕು, ಯೋಜನೆ ಹಾಕಿಕೊಳ್ಳಬೇಕು. ಗೃಹಲಕ್ಷ್ಮಿ ಯೋಜನೆಯ ಹಣದಿಂದ ಗ್ರಾಮೀಣ ಪ್ರದೇಶದ ಹಲವು ಮಹಿಳೆಯರು ಸಣ್ಣ ಪುಟ್ಟ ಸ್ವಉದ್ಯೋಗಗಳನ್ನು ಆರಂಭಿಸಿ ಗುರುತಿಸಿಕೊಳ್ಳುತ್ತಿದ್ದಾರೆ. ಈ ಗೃಹಲಕ್ಷ್ಮಿ ಯೋಜನೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ಗ್ರಾಮೀಣ ಮಹಿಳೆಯರು ಸ್ವಾವಲಂಬಿಯಾಗುವಂತೆ ನೋಡಿಕೊಳ್ಳಬೇಕು. ಪರಿಷ್ಕರಣೆ ಎಂದರೆ ಇರುವ ಫಲಾನುಭವಿಗಳನ್ನು ರದ್ದುಗೊಳಿಸುವುದಲ್ಲ, ಅರ್ಹ ಫಲಾನುಭವಿಗಳಿಗೆ ಯೋಜನೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ತಲುಪುವಂತೆ ನೋಡಿಕೊಳ್ಳುವುದು ಎನ್ನುವ ಎಚ್ಚರ ಸರಕಾರಕ್ಕೂ ಇರಬೇಕು.

ಶನಿವಾರ ರಾಜ್ಯದ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಸಿಇಒಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಜೊತೆಗೆ ಪ್ರಗತಿ ಪರಿಶೀಲನೆ ನಡೆಸಿದ ಬಳಿಕ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪತ್ರಿಕಾಗೋಷ್ಠಿಯಲ್ಲಿ ಹಲವು ಮಹತ್ವದ ನಿರ್ಧಾರಗಳನ್ನು ಪ್ರಕಟಿಸಿದ್ದಾರೆ. ಅದರಲ್ಲಿ ಮುಖ್ಯವಾದುದು ಗೃಹಲಕ್ಷ್ಮಿಗೆ ಹೊಸ ಅರ್ಜಿಗಳನ್ನು ಸಲ್ಲಿಸಬೇಕು ಎನ್ನುವುದು. ಗೃಹಲಕ್ಷ್ಮಿ ಜಾರಿಯಾಗಿ ಮೂರು ವರ್ಷಗಳಾಗುತ್ತಾ ಬರುತ್ತಿರುವುದರಿಂದ ಅತ್ಯವಶ್ಯವಾಗಿ ಪರಿಷ್ಕರಣೆ ನಡೆಯಬೇಕಾಗಿದೆ. ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳಲ್ಲಿ ಹಲವರು ಈಗಾಗಲೇ ನಿಧನರಾಗಿದ್ದು ಅವರ ಹೆಸರಿನಲ್ಲಿ ಇತರರು 100 ಕೋಟಿ ರೂಪಾಯಿಗೂ ಹೆಚ್ಚು ಹಣ ಪಡೆದಿರುವುದು ಗಮನಕ್ಕೆ ಬಂದಿದೆ, ಈ ಕಾರಣಕ್ಕಾಗಿ ಪರಿಷ್ಕರಣೆ ನಡೆಸುತ್ತಿದ್ದೇವೆ ಎಂದು ಮುಖ್ಯಮಂತ್ರಿ ಸ್ಪಷ್ಟೀಕರಣ ನೀಡಿದ್ದಾರೆ. ಗೃಹಲಕ್ಷ್ಮಿ ಯೋಜನೆಯ ಫಲಾನುಭವಿ ಕುಟುಂಬದ ಹಿರಿಯ ಮಹಿಳೆ. ಇವರ ದುರ್ಬಳಕೆಯ ಸಾಧ್ಯತೆಯೂ ಇಲ್ಲದಿಲ್ಲ. ಆದುದರಿಂದ ಪ್ರತೀ ಮೂರು ವರ್ಷಕ್ಕೊಮ್ಮೆ ಕಡ್ಡಾಯವಾಗಿ ಇದರ ಪರಿಷ್ಕರಣೆ ನಡೆಸುವುದು ಅತ್ಯಗತ್ಯವೂ ಕೂಡ. ಗೃಹಜ್ಯೋತಿ ಯೋಜನೆಯ ಫಲಾನುಭವಿಗಳಲ್ಲೂ ಗೊಂದಲವಿದೆ. ಇದನ್ನು ಪರಿಶೀಲಿಸುವುದು ಅತ್ಯಗತ್ಯ. ಈ ಪರಿಷ್ಕರಣೆ, ಪರಿಶೀಲನೆಯನ್ನು ನಿರಾಕರಿಸುವುದೆಂದರೆ ಪರೋಕ್ಷವಾಗಿ ಯೋಜನೆಯಲ್ಲಿ ನಡೆಯುವ ಅಕ್ರಮಗಳನ್ನು ಸಮರ್ಥಿಸಿಕೊಳ್ಳುವುದು ಎಂದು ಅರ್ಥ.

ರಾಜ್ಯದಲ್ಲಿ ಎಸ್‌ಐರ್ಆ ಪ್ರಕ್ರಿಯೆ ಕೂಡ ಆರಂಭವಾಗಿದೆ. ಈ ಹಿನ್ನೆಲೆಯಲ್ಲಿ ಯಾವುದೇ ಅರ್ಹ ಮತದಾರರಿಗೆ ತೊಡಕುಂಟಾಗದಂತೆ ನೋಡಿಕೊಳ್ಳಲು ವಾಸ ಪ್ರಮಾಣ ಪತ್ರ ವಿತರಣೆಗೂ ಸಿಎಂ ಸೂಚನೆ ನೀಡಿದ್ದಾರೆ. ಎಸ್‌ಐರ್ಆ ಪ್ರಕ್ರಿಯೆ ಘೋಷಣೆಯಾದ ದಿನದಿಂದ ಯಾವುದೇ ಮತದಾರರು ಪಟ್ಟಿಯಿಂದ ಹೊರ ಬೀಳದಂತೆ ನೋಡಿಕೊಳ್ಳಲು ರಾಜ್ಯ ಸರಕಾರ ಕ್ರಮವನ್ನು ತೆಗೆದುಕೊಳ್ಳುತ್ತಿದೆಯಾದರೂ, ಇದು ಎಷ್ಟರ ಮಟ್ಟಿಗೆ ಜನಸಾಮಾನ್ಯರಿಗೆ ಅದರಲ್ಲೂ ವಲಸೆ ಕಾರ್ಮಿಕರಂತಹ ತಳಸ್ತರದ ಜನರಿಗೆ ಸಹಾಯಕ್ಕೆ ಬರುತ್ತದೆ ಎನ್ನುವುದರ ಖಚಿತತೆಯಿಲ್ಲ. ವಿರೋಧ ಪಕ್ಷಗಳು ಇಂದು ನಿಜಕ್ಕೂ ಕಾಳಜಿ ವಹಿಸಬೇಕಾಗಿರುವುದು ಗೃಹ ಲಕ್ಷ್ಮಿ ಯೋಜನೆಯ ಪರಿಷ್ಕರಣೆಯ ಕುರಿತಂತೆ ಅಲ್ಲ. ಬದಲಿಗೆ ಮತದಾರರ ಪಟ್ಟಿಯ ಪರಿಷ್ಕರಣೆಯ ಕುರಿತಂತೆ. ಯಾಕೆಂದರೆ, ಈ ಪರಿಷ್ಕರಣೆಯಲ್ಲಿ ಅರ್ಹ ಮತದಾರರು ಹೊರಬಿದ್ದರೆ ಭವಿಷ್ಯದಲ್ಲಿ ಅವರು ಸರಕಾರದ ಕಲ್ಯಾಣ ಯೋಜನೆಗಳಿಂದಲೂ ಹೊರ ಬಿದ್ದಂತೆ. ವಿರೋಧ ಪಕ್ಷದ ನಾಯಕರಿಗೆ ನಿಜಕ್ಕೂ ಜನರ ಬಗ್ಗೆ ಕಾಳಜಿಯಿದ್ದರೆ, ಜನಪರ ಯೋಜನೆಗಳು ಜನಸಾಮಾನ್ಯರನ್ನು ಪೂರ್ಣ ಪ್ರಮಾಣದಲ್ಲಿ ತಲುಪಬೇಕು ಎನ್ನುವ ಉದ್ದೇಶವಿದ್ದರೆ ಅವರು ಎಸ್‌ಐರ್ಆ ವಿರುದ್ಧ ಧ್ವನಿಯೆತ್ತಬೇಕು. ಮತದಾರರ ಪಟ್ಟಿ ಪರಿಷ್ಕರಣೆ ನಡೆಯಲಿ, ಆದರೆ ಮತದಾರರು ತಮ್ಮನ್ನು ತಾವು ಮತದಾನಕ್ಕೆ ಅರ್ಹರು ಎಂದು ಸಾಬೀತು ಪಡಿಸುವುದಕ್ಕಿರುವ ನಿಯಮಗಳ ಸಡಿಲಿಕೆಗಾಗಿ ಕೇಂದ್ರ ಸರಕಾರವನ್ನು ಒತ್ತಾಯಿಸಬೇಕು. ಎಸ್‌ಐರ್ಆ ಯಾವ ಕಾರಣಕ್ಕೂ ಪೌರತ್ವ ಪರಿಷ್ಕರಣೆಯಾಗಬಾರದು ಎಂದು ಆಗ್ರಹಿಸಬೇಕು. ಆಗ, ಗೃಹ ಲಕ್ಷ್ಮಿ ಪರಿಷ್ಕರಣೆಯ ಬಗ್ಗೆಯೂ ಧ್ವನಿಯೆತ್ತುವ ನೈತಿಕತೆಯನ್ನು ತಮ್ಮದಾಗಿಸಿಕೊಳ್ಳುತ್ತಾರೆ.

ಎಸ್‌ಐಆರ್‌ನಿಂದ ಮತದಾರರು ವಂಚಿತರಾಗದಂತೆ ವಾಸಪ್ರಮಾಣ ಪತ್ರ ವಿತರಣೆಯಿಂದ ಸಮಸ್ಯೆ ಪರಿಹಾರವಾಗುತ್ತದೆ ಎನ್ನುವಂತಿಲ್ಲ. ಅಂತಹ ಪ್ರಮಾಣಪತ್ರ, ಮಾನದಂಡವನ್ನು ಪೂರ್ಣವಾಗಿ ಪೂರೈಸುವುದಿಲ್ಲ. ಚುನಾವಣಾ ಆಯೋಗದ ಪ್ರಕಾರ ಬೇಕಾಗಿರುವುದು ಸಕ್ಷಮ ಪ್ರಾಧಿಕಾರವು ನೀಡುವ ಶಾಶ್ವತ ವಾಸಸ್ಥಳ ಪ್ರಮಾಣ ಪತ್ರ. ಸಾಮಾನ್ಯ ವಾಸ ಪ್ರಮಾಣ ಪತ್ರಕ್ಕೂ ಇದಕ್ಕೂ ವ್ಯತ್ಯಾಸವಿದೆ.

# ಟ್ರಂಪ್ ದಾಳಿಗೆ ಹೆದರಿದ ಅಂಬಾನಿ; ಟ್ರಂಪ್ ಮಗನ ಕಂಪನಿಗೆ 800 ಕೋಟಿ ರೂ. ಹೂಡಿಕೆ!

ಜೂನ್ 9ರಂದು ಪ್ರೊಪಬ್ಲಿಕಾ ಪ್ರಕಟಿಸಿರುವ ತನಿಖಾ ವರದಿಯು ಸ್ಫೋಟಕ ಸಂಗತಿಗಳ ಮೂಲಕ ರಾಜಕಾರಣದ ಕರಾಳ ಮುಖಗಳನ್ನು ಅನಾವರಣ ಮಾಡಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕುಟುಂಬ ಮತ್ತು ಅಂಬಾನಿ ಒಡೆತನದ ರಿಲಯನ್ಸ್ ನಡುವಿನ ಕೊಳುಕೊಡುಗೆಗಳು, ಎರಡು ಫ್ಯಾಮಿಲಿಗಳ ನಡುವಿನ ಸ್ವಹಿತಾಸಕ್ತಿಗಳನ್ನು ತೆರೆದಿಟ್ಟಿವೆ. ಅಮೆರಿಕ ಅಧ್ಯಕ್ಷನ ನಿರಂತರ ದಾಳಿಗೆ ಹೆದರಿದ ಅಂಬಾನಿ, ಕನಿಷ್ಠ 100 ಮಿಲಿಯನ್ ಡಾಲರ್ (800+ ಕೋಟಿ ರೂಪಾಯಿ) ಬಂಡವಾಳವನ್ನು ಟ್ರಂಪ್ ಅವರ ಹಿರಿಯ ಮಗನ ಶೇರ್ ಗಳಿರುವ ಕಂಪನಿಗೆ ಹೂಡಿಕೆ ಮಾಡಿದ್ದಾರೆ.

ಡೊನಾಲ್ಡ್ ಟ್ರಂಪ್ ಅವರ ಹಿರಿಯ ಮಗನಾದ ಡೊನಾಲ್ಡ್ ಟ್ರಂಪ್ ಜೂನಿಯರ್ ರಹಸ್ಯವಾಗಿ ಶೇರುಗಳನ್ನು ಹೊಂದಿದ್ದ ಟೆಕ್ಸಾಸ್ ಮೂಲದ ಸ್ಟಾರ್ಟ್‌ಅಪ್ ಕಂಪನಿಯ ಹೆಸರು- ಅಮೆರಿಕಾ ಫಸ್ಟ್ ರಿಫೈನಿಂಗ್ (). ರಿಲಯನ್ಸ್ ಕಂಪನಿ ಹೂಡಿಕೆ ಮಾಡಲು ಹೆಜ್ಜೆ ಇಡುವ ಮುನ್ನ ಎಎಫ್‌ಆರ್ ತೀವ್ರ ಆರ್ಥಿಕ, ಆಡಳಿತಾತ್ಮಕ ಮತ್ತು ಕಾನೂನು ಬಿಕ್ಕಟ್ಟಿನಲ್ಲಿ ಸಿಲುಕಿ ಮುಳುಗುವ ಸ್ಥಿತಿಯಲ್ಲಿತ್ತು. ಗಲ್ಫ್ ಕರಾವಳಿಯ ಪೋರ್ಟ್ ಆಫ್ ಬ್ರೌನ್ಸ್ ವಿಲ್ಲೆಯಲ್ಲಿ ಬೃಹತ್ ತೈಲ ಸಂಸ್ಕರಣಾಗಾರ ನಿರ್ಮಿಸುವ ಗುರಿ ಹೊಂದಿದ್ದ ಈ ಕಂಪನಿಗೆ, ಹಣ ಹೂಡಲು ಯಾರೂ ಮನಸ್ಸು ಮಾಡಿರಲಿಲ್ಲ. ಬಂಡವಾಳ ಸಂಗ್ರಹಿಸಲು ಸಾಧ್ಯವಾಗದೆ ಕಳೆದ ಹತ್ತು ವರ್ಷಗಳಿಂದ ತೀವ್ರ ಆರ್ಥಿಕ ಕೊರತೆ ಎದುರಿಸುತ್ತಿತ್ತು ಎಎಫ್‌ಆರ್.

ಈ ಕಂಪನಿಯ ಸಿಇಒ ಜಾನ್ ಕ್ಯಾಲ್ಸ್ ಮತ್ತು ಆತನ ಸಂಸ್ಥೆಗಳ ವಿರುದ್ಧ ವಂಚನೆ ಆರೋಪಗಳನ್ನು ಮಾಡಿ ಬೇರೆ ಬೇರೆ ಪಾಲುದಾರರು ಕೋರ್ಟ್‌ಗಳಲ್ಲಿ ಸಾಲು ಸಾಲು ಮೊಕದ್ದಮೆಗಳನ್ನು ಹೂಡಿದ್ದರು. ಒಂದು ಹಂತದಲ್ಲಿ, ಇವರ ವಿರುದ್ಧ ಎಂಟು ಕಂಪನಿಗಳು ಏಕಕಾಲದಲ್ಲಿ ಕಾನೂನು ಸಮರ ಸಾರಿದ್ದವು. ಯೋಜನೆಗಳ ಎಲ್ಲಾ ಗಡುವುಗಳನ್ನು ಸರಣಿಯಾಗಿ ಮಿಸ್ ಮಾಡಿಕೊಂಡಿದ್ದರಿಂದ, ಇಂಧನ ಉದ್ಯಮದ ದೊಡ್ಡ ಹೂಡಿಕೆದಾರರು ಈ ಕಂಪನಿಯಲ್ಲಿ ವಿಶ್ವಾಸ ಕಳೆದುಕೊಂಡಿದ್ದರು. ಹೀಗಿದ್ದಾಗ ಅಂಬಾನಿ ಕಂಪನಿ ಬೃಹತ್ ಬಂಡವಾಳ ಹೂಡಿಕೆ ಮಾಡಿದ್ದು ಏಕೆ?

ಈ ಹಿಂದೆ ಟ್ರಂಪ್ ಮತ್ತು ಅಂಬಾನಿ ಸಂಬಂಧ ಚೆನ್ನಾಗಿಯೇ ಇತ್ತು. 2024ರಲ್ಲಿ ಮುಂಬೈನಲ್ಲಿ ಹಮ್ಮಿಕೊಳ್ಳಲಾಗಿದ್ದ ರಿಯಲ್ ಎಸ್ಟೇಟ್ ಯೋಜನೆಯೊಂದಕ್ಕಾಗಿ ರಿಲಯನ್ಸ್ ಸಂಸ್ಥೆಯು ಟ್ರಂಪ್ ಸಂಸ್ಥೆಗೆ ಬರೋಬ್ಬರಿ 10 ಮಿಲಿಯನ್ ಡಾಲರ್ (ಸುಮಾರು 80+ ಕೋಟಿ ರೂಪಾಯಿ) ಹಣವನ್ನು ಅಭಿವೃದ್ಧಿ ಶುಲ್ಕವಾಗಿ ಪಾವತಿಸಿತ್ತು. ಅದೇ ವರ್ಷ (2024) ಭಾರತದಲ್ಲಿ ನಡೆದ ಅನಂತ್ ಅಂಬಾನಿಯ (ಮುಖೇಶ್ ಅಂಬಾನಿ ಅವರ ಕಿರಿಯ ಮಗ) ಮದುವೆ ಸಂದರ್ಭದಲ್ಲಿ ಪ್ರೀ ವೆಡ್ಡಿಂಗ್ ಪಾರ್ಟಿಗೆ ಡೊನಾಲ್ಡ್ ಟ್ರಂಪ್ ಅವರ ಮಗಳಾದ ಇವಾಂಕಾ ಟ್ರಂಪ್ ಹಾಜರಾಗಿದ್ದರು. ಡೊನಾಲ್ಡ್ ಟ್ರಂಪ್ ಅವರು ಅಮೆರಿಕದ ಅಧ್ಯಕ್ಷರಾಗಿ ಎರಡನೇ ಬಾರಿಗೆ ಅಧಿಕಾರ ವಹಿಸಿಕೊಂಡಾಗ, ವಾಷಿಂಗ್ಟನ್ ಡಿಸಿಯಲ್ಲಿ ನಡೆದ ಅವರ ಅದ್ದೂರಿ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಮುಖೇಶ್ ಅಂಬಾನಿ ಅವರು ವೈಯಕ್ತಿಕವಾಗಿ ಭಾರತದಿಂದ ತೆರಳಿದ್ದರು. ಅಷ್ಟೇ ಅಲ್ಲದೆ, ಅಲ್ಲಿ ನಡೆದ ಖಾಸಗಿ ಔತಣಕೂಟದಲ್ಲಿ ಭಾಗವಹಿಸಿ ಅಧ್ಯಕ್ಷ ಟ್ರಂಪ್ ಅವರೊಂದಿಗೆ ಫೋಟೋಗೆ ಪೋಸ್ ನೀಡಿದ್ದರು. ಹೀಗಿದ್ದ ಟ್ರಂಪ್ ಮತ್ತು ಅಂಬಾನಿ ಕುಟುಂಬದ ನಡುವಿನ ಸಂಬಂಧ ಇತ್ತೀಚೆಗೆ ಹಳಸಿತ್ತು. ಟ್ರಂಪ್ ಅವರ ತಾಳಕ್ಕೆ ತಕ್ಕಂತೆ ಅಂಬಾನಿ ಕಂಪನಿ ಎದ್ದು ಕುಣಿಯಲು ಸಿದ್ಧವಿರಲಿಲ್ಲ. ಟ್ರಂಪ್ ತನ್ನ ಎಲ್ಲ ಅಸ್ತ್ರಗಳನ್ನು ಪ್ರಯೋಗಿಸಿ, ರಿಲಯನ್ಸ್ ಕಂಪನಿಯು ತನ್ನ ಕುಟುಂಬದ ಹಿತಾಸಕ್ತಿಯ ಮರ್ಜಿಗೆ ಬೀಳುವಂತೆ ನೋಡಿಕೊಂಡಿದ್ದಾರೆ.

2022ರಲ್ಲಿ ರಷ್ಯಾ ದೇಶವು ಉಕ್ರೇನ್ ಮೇಲೆ ಆಕ್ರಮಣ ಮಾಡಿದಾಗಿನಿಂದ, ರಿಲಯನ್ಸ್ ಸಂಸ್ಥೆಯು ರಷ್ಯಾದಿಂದ ಭಾರೀ ರಿಯಾಯಿತಿ ದರದಲ್ಲಿ ಕಚ್ಚಾ ತೈಲವನ್ನು ಆಮದು ಮಾಡಿಕೊಂಡು, ಸಂಸ್ಕರಿಸಿ, ಬಿಲಿಯನ್ಗಟ್ಟಲೆ ಡಾಲರ್ ಲಾಭ ಗಳಿಸುತ್ತಿತ್ತು. ಇದರಿಂದ ಕೋಪಗೊಂಡ ಅಧ್ಯಕ್ಷ ಟ್ರಂಪ್, ರಷ್ಯಾದ ಇಂಧನ ಆದಾಯಕ್ಕೆ ತಡೆ ಹಾಕಲು 2025ರ ಆಗಸ್ಟ್‌ನಲ್ಲಿ ಭಾರತದ ಮೇಲಿನ ಸುಂಕಗಳನ್ನು ದಿಢೀರನೆ ಶೇಕಡಾ 50ಕ್ಕೆ ದ್ವಿಗುಣಗೊಳಿಸಿದರು. ರಿಲಯನ್ಸ್‌ನಂತಹ ಸಂಸ್ಥೆಗಳು ರಷ್ಯಾದಿಂದ ತೈಲ ಖರೀದಿಸುವುದನ್ನು ಸಂಪೂರ್ಣವಾಗಿ ನಿಲ್ಲಿಸುವಂತೆ ಮಾಡುವುದೇ ಇದರ ನೇರ ಉದ್ದೇಶವಾಗಿತ್ತು.

ಟ್ರಂಪ್ ಅವರ ಶ್ವೇತಭವನದ ಮುಖ್ಯ ವ್ಯಾಪಾರ ಸಲಹೆಗಾರರಾಗಿದ್ದ ಪೀಟರ್ ನವರೊ ಅವರು ಸಾರ್ವಜನಿಕವಾಗಿ ಹೇಳಿಕೆ ನೀಡಿ, ''ಭಾರತದ ರಾಜಕೀಯ ಸಂಪರ್ಕ ಹೊಂದಿರುವ ಇಂಧನ ದೈತ್ಯರು ಪುಟಿನ್ ಅವರ ಯುದ್ಧದ ಯಂತ್ರಕ್ಕೆ ಹಣ ಒದಗಿಸುತ್ತಿದ್ದಾರೆ'' ಎಂದು ಕಟುವಾಗಿ ವಾಗ್ದಾಳಿ ನಡೆಸಿದ್ದರು. ಇದು ನೇರವಾಗಿ ಅಂಬಾನಿ ಕುಟುಂಬವನ್ನು ಉದ್ದೇಶಿಸಿ ಮಾಡಿದ ಗಂಭೀರ ಜಾಗತಿಕ ಆರೋಪವಾಗಿತ್ತು.



ವೆನೆಜುವೆಲಾ ಮತ್ತು ಇರಾನ್ ದೇಶಗಳ ಮೇಲೆ ಅಮೆರಿಕ ಕಟ್ಟುನಿಟ್ಟಿನ ಆರ್ಥಿಕ ನಿರ್ಬಂಧಗಳನ್ನು ಹೇರಿತ್ತು. ಜಗತ್ತಿನಲ್ಲೇ ಅತಿ ದೊಡ್ಡ ತೈಲ ಶುದ್ಧೀಕರಣ ಘಟಕ ಹೊಂದಿರುವ ರಿಲಯನ್ಸ್ ಸಂಸ್ಥೆಗೆ ಇದು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿತು. ಇದರಿಂದಾಗಿ ಆ ದೇಶಗಳಿಂದ ಮುಕ್ತವಾಗಿ ಕಚ್ಚಾ ತೈಲ ಖರೀದಿಸಲು ರಿಲಯನ್ಸ್‌ಗೆ ತಾಂತ್ರಿಕ ಮತ್ತು ಕಾನೂನು ಅಡೆತಡೆಗಳು ಎದುರಾದವು. ಒಂದು ವೇಳೆ ಅಮೆರಿಕದ ಅನುಮತಿ (ಪರವಾನಗಿ) ಇಲ್ಲದೆ ವ್ಯಾಪಾರ ಮುಂದುವರಿಸಿದ್ದರೆ, ರಿಲಯನ್ಸ್ ಸಂಸ್ಥೆಯು ಜಾಗತಿಕವಾಗಿ ಕಪ್ಪುಪಟ್ಟಿಗೆ ಸೇರುವ ಭೀತಿಯಲ್ಲಿತ್ತು.

ಅಂಬಾನಿ ಒಡೆತನದ ರಿಲಯನ್ಸ್ ಸಂಸ್ಥೆಯನ್ನು ಆರ್ಥಿಕವಾಗಿ ಹತ್ತಿಕ್ಕಲು ಟ್ರಂಪ್ ಸರ್ಕಾರವು ಸುಂಕದ ಅಸ್ತ್ರ ಹಾಗೂ ಜಾಗತಿಕ ನಿರ್ಬಂಧಗಳ ಮೂಲಕ ಭಾರೀ ಒತ್ತಡ ಹೇರಿತ್ತು. ಇದೇ ಕಾರಣಕ್ಕಾಗಿ, ಉಂಟಾಗಿದ್ದ ಉದ್ವಿಗ್ನತೆಯನ್ನು ಸರಾಗಗೊಳಿಸಲು ಮತ್ತು ಟ್ರಂಪ್ ಆಡಳಿತದ ಕೆಂಗಣ್ಣಿಗೆ ಮತ್ತಷ್ಟು ಗುರಿಯಾಗದಿರಲು ಅಂಬಾನಿ ಕುಟುಂಬವು ಏನಾದರೂ ಕೊಡುಗೆಯನ್ನು ನೀಡಲೇಬೇಕಾಯಿತು. ಹೀಗಾಗಿ ಟ್ರಂಪ್ ಜೂನಿಯರ್ ರಹಸ್ಯ ಪಾಲುದಾರಿಕೆ ಹೊಂದಿದ್ದ ಟೆಕ್ಸಾಸ್ ಕಂಪನಿಗೆ ದೊಡ್ಡ ಮೊತ್ತದ ಹೂಡಿಕೆ ಮಾಡಬೇಕಾಗಿ ಬಂತು ಎಂದು ವರದಿ ವಿಶ್ಲೇಷಿಸಿದೆ.

ನವೆಂಬರ್ ವ್ಯವಹಾರ

ಟ್ರಂಪ್ ನೇತೃತ್ವದ ಸರ್ಕಾರವು ಒಂದೆಡೆ ರಿಲಯನ್ಸ್ ವಿರುದ್ಧ ಕಠಿಣ ನಿಲುವು ವಿಧಿಸಿದ್ದ ಅವಧಿಯಲ್ಲೇ ಮತ್ತೊಂದೆಡೆ ಟ್ರಂಪ್ ಫ್ಯಾಮಿಲಿ ಹಿಂಬದಿಯಿಂದ ವ್ಯವಹಾರ ಕುದುರಿಸಲು ಮುಂದಾಯಿತು. 2025ರ ನವೆಂಬರ್‌ನಲ್ಲಿ ಡೊನಾಲ್ಡ್ ಟ್ರಂಪ್ ಜೂನಿಯರ್ ಭಾರತಕ್ಕೆ ಭೇಟಿ ನೀಡಿದಾಗ ಅಂಬಾನಿ ಕುಟುಂಬ ಅವರನ್ನು ಅತ್ಯಂತ ಅದ್ದೂರಿಯಾಗಿ ಬರಮಾಡಿಕೊಂಡಿತು. ಮುಖೇಶ್ ಅಂಬಾನಿ ಅವರ ಕಿರಿಯ ಮಗ ಅನಂತ್ ಅಂಬಾನಿ ಅವರು ಟ್ರಂಪ್ ಜೂನಿಯರ್ ಅವರನ್ನು ತಮ್ಮ ಖಾಸಗಿ ಮೃಗಾಲಯಕ್ಕೆ ಕರೆದೊಯ್ದು ಸುತ್ತಾಡಿಸಿದರು. ಅಷ್ಟೇ ಅಲ್ಲದೆ, ರಾತ್ರಿಯ ಔತಣಕೂಟದಲ್ಲಿ ಇಬ್ಬರೂ ಜೊತೆಯಾಗಿ ಗುಜರಾತಿ ಜಾನಪದ ನೃತ್ಯ (ಗರ್ಬಾ/ದಾಂಡಿಯಾ) ಮಾಡುವ ಮೂಲಕ ವೈಯಕ್ತಿಕ ಮಟ್ಟದಲ್ಲಿ ಸಂಬಂಧವನ್ನು ಗಟ್ಟಿಗೊಳಿಸಿಕೊಂಡರು.

ಟ್ರಂಪ್ ಜೂನಿಯರ್ ಭಾರತದ ಪ್ರವಾಸ ಮುಗಿಸಿ ಅಮೆರಿಕಕ್ಕೆ ಮರಳಿದ ಮುಂದಿನ ವಾರದಲ್ಲೇ, ಟೆಕ್ಸಾಸ್‌ನ ಅಪರಿಚಿತ ತೈಲ ಸಂಸ್ಕರಣಾ ಸ್ಟಾರ್ಟ್‌ಅಪ್ ಕಂಪನಿಯಾದ ಅಮೆರಿಕಾ ಫಸ್ಟ್ ರಿಫೈನಿಂಗ್ () ಪರವಾಗಿ ಕಾಗದಪತ್ರಗಳು ಸಿದ್ಧವಾದವು. ಈ ಕಂಪನಿಯಲ್ಲಿ ಡೊನಾಲ್ಡ್ ಟ್ರಂಪ್ ಜೂನಿಯರ್ ರಹಸ್ಯವಾಗಿ ಷೇರುಗಳನ್ನು ಹೊಂದಿದ್ದರು. ಒಂದು ದಶಕದಿಂದ ಹಣ ಸಿಗದೆ, ಸಾಲದ ಸುಳಿಗೆ ಸಿಲುಕಿ ದಿವಾಳಿಯಾಗಿದ್ದ ಈ ಕಂಪನಿಗೆ ಅಂಬಾನಿ ಒಡೆತನದ ರಿಲಯನ್ಸ್ ಸಂಸ್ಥೆ ಕನಿಷ್ಠ 100 ಮಿಲಿಯನ್ ಡಾಲರ್ ಹೂಡಿಕೆ ಮಾಡಲು ಒಪ್ಪಂದ ಮಾಡಿಕೊಂಡಿತು.

ಈ ಹೂಡಿಕೆಯ ಒಪ್ಪಂದವು ಕೇವಲ ಸಾಮಾನ್ಯ ಕಾರ್ಪೊರೇಟ್ ವ್ಯವಹಾರವಾಗಿರಲಿಲ್ಲ. ರಿಲಯನ್ಸ್‌ನ ಇಂಧನ ವ್ಯವಹಾರವನ್ನು ನೋಡಿಕೊಳ್ಳುವ ಅನಂತ್ ಅಂಬಾನಿ ಅವರೇ ಸ್ವತಃ ಈ ಟೆಕ್ಸಾಸ್ ರಿಫೈನರಿ ಒಪ್ಪಂದಕ್ಕಾಗಿ ಹಲವು ತಿಂಗಳುಗಳ ಕಾಲ ವೈಯಕ್ತಿಕವಾಗಿ ಕೆಲಸ ಮಾಡಿ, ಒಪ್ಪಂದವು ಯಾವುದೇ ಅಡೆತಡೆಯಿಲ್ಲದೆ ಪೂರ್ಣಗೊಳ್ಳುವಂತೆ ನೋಡಿಕೊಂಡರು.

ಈ ಒಪ್ಪಂದದ ಮೂಲಕ ಅಂಬಾನಿಯವರು ಜಾಗತಿಕ ಇಂಧನ ಮಾರುಕಟ್ಟೆಗೆ ಒಂದು ಪ್ರಬಲ ಸಂದೇಶ ರವಾನಿಸಿದರು. ''ಅಮೆರಿಕದ ನೆಲದಲ್ಲೇ ಬೃಹತ್ ತೈಲ ಸಂಸ್ಕರಣಾಗಾರ ನಿರ್ಮಿಸುವ ಯೋಜನೆಗೆ ನೂರಾರು ಕೋಟಿ ಹೂಡುವ ಭರವಸೆ ನೀಡುವ ಮೂಲಕ, ರಿಲಯನ್ಸ್ ಸಂಸ್ಥೆಯು ಟ್ರಂಪ್ ಅವರ ವೈರಿಯ ಸ್ಥಾನದಿಂದ ಪರಮ ಮಿತ್ರನ ಸ್ಥಾನಕ್ಕೆ ಜಿಗಿಯಿತು'' ಎಂದು ಬ್ಲೂಮ್‌ಬರ್ಗ್ ಪತ್ರಿಕೆ ಬಣ್ಣಿಸುತ್ತದೆ. ಅಮೆರಿಕಕ್ಕೆ ಆರ್ಥಿಕ ಲಾಭ ಮಾಡಿಕೊಡುವ ಮೂಲಕ ಟ್ರಂಪ್ ಸರ್ಕಾರದ ಕೋಪವನ್ನು ತಣ್ಣಗಾಗಿಸುವುದು ಇದರ ಮುಖ್ಯ ತಂತ್ರವಾಗಿತ್ತು.

ಅಂಬಾನಿ ಕುಟುಂಬ ಕೈಗೊಂಡ ಈ ಕಾರ್ಯತಂತ್ರದ ಪರಿಣಾಮವಾಗಿ, ಫೆಬ್ರವರಿ 2026ರ ವೇಳೆಗೆ ಅಮೆರಿಕ ಸರ್ಕಾರವು ಭಾರತದ ಮೇಲಿನ ಸುಂಕಗಳನ್ನು ನಾಟಕೀಯವಾಗಿ ಕಡಿಮೆ ಮಾಡಿತು. ಅಷ್ಟೇ ಅಲ್ಲದೆ, ರಿಲಯನ್ಸ್ ಸಂಸ್ಥೆಗೆ ವೆನೆಜುವೆಲಾದಿಂದ ಕಚ್ಚಾ ತೈಲ ಖರೀದಿಸಲು ವಿಶೇಷ ಪರವಾನಗಿ ಸಿಕ್ಕಿತು ಮತ್ತು ರಷ್ಯಾದ ತೈಲ ಖರೀದಿಯ ಮೇಲಿನ ಕಟ್ಟುನಿಟ್ಟಿನ ನಿರ್ಬಂಧಗಳಿಂದಲೂ ವಿನಾಯಿತಿ ದೊರೆಯಿತು.

ಅಂತಿಮವಾಗಿ ಮಾರ್ಚ್ 2026 ರಲ್ಲಿ, ಸ್ವತಃ ಅಧ್ಯಕ್ಷ ಟ್ರಂಪ್ ಅವರೇ ತಮ್ಮ ಟ್ರುತ್ ಸೋಶಿಯಲ್ ಖಾತೆಯಲ್ಲಿ ಅಂಬಾನಿ ಕಂಪನಿಗೆ ಧನ್ಯವಾದಗಳನ್ನು ಅರ್ಪಿಸಿದರು. ಈ ಮೂಲಕ ಅಂಬಾನಿ ಕುಟುಂಬವು ಟ್ರಂಪ್ ದಾಳಿಯನ್ನು ತಡೆದು ತನ್ನ ಇಂಧನ ಸಾಮ್ರಾಜ್ಯವನ್ನು ಸಂಪೂರ್ಣವಾಗಿ ರಕ್ಷಿಸಿಕೊಂಡಿತು ಎಂದು ಪ್ರೊಪಬ್ಲಿಕಾ ವರದಿ ವಿವರಿಸುತ್ತದೆ.

ಆರೋಪ ನಿರಾಕರಣೆ

ಡೊನಾಲ್ಡ್ ಟ್ರಂಪ್ ಜೂನಿಯರ್ ಅವರ ವಕ್ತಾರರು ಈ ವ್ಯವಹಾರವನ್ನು ನಿರಾಕರಿಸಿದ್ದಾರೆ. ''ಟ್ರಂಪ್ ಜೂನಿಯರ್ ಅವರು ಅಮೆರಿಕಾ ಫಸ್ಟ್ ರಿಫೈನಿಂಗ್ () ಕಂಪನಿಯಲ್ಲಿ ಕೇವಲ ಒಬ್ಬ ನಿಷ್ಕ್ರಿಯ ಅಲ್ಪಸಂಖ್ಯಾತ ಹೂಡಿಕೆದಾರರಾಗಿದ್ದಾರೆ ಮತ್ತು ಕಂಪನಿಯ ದೈನಂದಿನ ಯಾವುದೇ ಕಾರ್ಯಾಚರಣೆಯ ಪಾತ್ರದಲ್ಲಿ ಅವರು ಭಾಗಿಯಾಗಿಲ್ಲ. ಯಾವುದೇ ಹೂಡಿಕೆಗಾಗಿ ಸರ್ಕಾರವನ್ನು ಬಳಸಿಕೊಂಡಿಲ್ಲ'' ಎಂದು ಹೇಳಿಕೆ ನೀಡಿದ್ದಾರೆ.

ಇತ್ತ ಭಾರತದ ರಿಲಯನ್ಸ್ ಸಂಸ್ಥೆಯೂ ತನ್ನ ಮೇಲಿನ ಆರೋಪಗಳನ್ನು ತಳ್ಳಿಹಾಕಿದೆ. ''ರಿಲಯನ್ಸ್ ಮಾಡಿದ ಈ ಹೂಡಿಕೆಗೂ ಮತ್ತು ಅಮೆರಿಕ ಸರ್ಕಾರವು ಸುಂಕ ಕಡಿತಗೊಳಿಸಿದ ಅಥವಾ ತೈಲ ಖರೀದಿಗೆ ಪರವಾನಗಿ ನೀಡಿದ ನಿರ್ಧಾರಗಳಿಗೂ ಯಾವುದೇ ಸಂಬಂಧವಿಲ್ಲ. ಈ ಹೂಡಿಕೆಯನ್ನು ಕೇವಲ ವಾಣಿಜ್ಯ ಅರ್ಹತೆ, ಕಾರ್ಯತಂತ್ರದ ಹೊಂದಾಣಿಕೆ ಮತ್ತು ಭವಿಷ್ಯದ ಮೌಲ್ಯ ಸೃಷ್ಟಿಯ ಆಧಾರದ ಮೇಲೆ ಮಾಡಲಾಗಿದೆ'' ಎಂದು ರಿಲಯನ್ಸ್ ತಿಳಿಸಿದೆ.

ಟೆಕ್ಸಾಸ್ ಸಂಸ್ಥೆಯು ಈ ವರದಿಯ ಎಲ್ಲ ಅಂಶಗಳು ಸುಳ್ಳು ಎಂದು ಜರಿದಿದೆ. ''ಈ ಒಪ್ಪಂದದಲ್ಲಿ ಯಾವುದೇ ರೀತಿಯ ಹಿತಾಸಕ್ತಿಗಳ ಸಂಘರ್ಷ ನಡೆದಿಲ್ಲ'' ಎಂದು ವೈಟ್ ಹೌಸ್ ಪ್ರತಿಕ್ರಿಯಿಸಿದೆ. ಆದರೆ ಈ ಒಪ್ಪಂದವು ಕೇವಲ ಒಂದು ಸಾಮಾನ್ಯ ವಾಣಿಜ್ಯ ವ್ಯವಹಾರವಾಗಿ ಕಂಡುಬರುತ್ತಿಲ್ಲ. ಹತ್ತು ವರ್ಷಗಳಿಂದ ಹೂಡಿಕೆ ಸಿಗದೆ ಮುಳುಗುತ್ತಿದ್ದ ಕಂಪನಿಗೆ ಅಂಬಾನಿ ಕುಟುಂಬವು 100 ಮಿಲಿಯನ್ ಡಾಲರ್ ನಷ್ಟು ಬೃಹತ್ ಬಂಡವಾಳ ಹೂಡಿದ್ದು ಹೇಗೆ? ರಿಲಯನ್ಸ್ ಸಂಸ್ಥೆಗೆ ಪೂರಕವಾದ ಅಮೆರಿಕದ ವಿದೇಶಾಂಗ ನೀತಿಗಳು ಜಾರಿಯಾಗಿದ್ದು ಆಕಸ್ಮಿಕವೇ? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಅಪಾರ ಪಾಂಡಿತ್ಯವೇನೂ ಬೇಕಿಲ್ಲ.

ರಾಜಕೀಯ ಅಧಿಕಾರ ಮತ್ತು ದೊಡ್ಡ ಇಂಧನ ಉದ್ಯಮಗಳು ಒಂದಾದಾಗ ಏನಾಗುತ್ತದೆ ಎಂಬುದಕ್ಕೆ ಈ ವಿದ್ಯಮಾನ ಕ್ಲಾಸಿಕ್ ಉದಾಹರಣೆ. ನಾಯಕರ ವೈಯಕ್ತಿಕ ಒಪ್ಪಂದಗಳು ದೇಶದ ಅಧಿಕೃತ ನಿರ್ಧಾರಗಳ ಮೇಲೆಯೇ ಪ್ರಭಾವ ಬೀರಬಹುದು ಎಂಬುದಕ್ಕೆ ಈ ಘಟನೆ ಸಾಕ್ಷಿಯಾಗಿದೆ. ಈ ಒಪ್ಪಂದವನ್ನು ಟ್ರಂಪ್ ಸರ್ಕಾರವು ಅಮೆರಿಕದ ಆರ್ಥಿಕತೆಗೆ ಸಿಕ್ಕ ಜಯ ಎಂದು ಕರೆಯುತ್ತಿದೆ. ಆದರೆ ವಿಮರ್ಶಕರು ಇದನ್ನು ಅಧಿಕಾರ ದುರ್ಬಳಕೆ ಮತ್ತು ಕುಟುಂಬ ರಾಜಕಾರಣದ ಪರಮಾವಧಿ ಎಂದು ಟೀಕಿಸುತ್ತಿದ್ದಾರೆ.

## ಕುಂಕುಮ್ ಭಾಗ್ಯ ನಟಿ ಸಂಚಿತಾ ಆತ್ಮಹತ್ಯೆ

ಮುಂಬೈ (ಮಹಾರಾಷ್ಟ್ರ): ಜನಪ್ರಿಯ ಕುಂಕುಮ್ ಭಾಗ್ಯ ಧಾರಾವಾಹಿಯ ಪಾತ್ರಕ್ಕೆ ಹೆಸರುವಾಸಿಯಾದ ಕಿರುತೆರೆ ನಟಿ ಸಂಚಿತಾ ಉಗಾಲೆ ತಮ್ಮ 22ನೇ ವಯಸ್ಸಿನಲ್ಲಿ ಆತ್ಮಹತ್ಯೆಗೆ ಶರಣಾಗಿದ್ದಾರೆ.

ಪೊಲೀಸ್ ಅಧಿಕಾರಿಗಳ ಪ್ರಕಾರ, ಜೂನ್ 14ರಂದು ಮಹಾರಾಷ್ಟ್ರದ ನಲಸೋಪರಾದ ಆಚೋಲೆ ಗ್ರಾಮದ ಸಾಯಿ ಸಂತೋಷಿ ಕಟ್ಟಡದಲ್ಲಿರುವ ಅವರ ನಿವಾಸದಲ್ಲಿ ಈ ಘಟನೆ ನಡೆದಿದೆ. ಪ್ರಾಥಮಿಕ ವರದಿಗಳ ಪ್ರಕಾರ ನಟಿ ಸಂಜೆ 7:00 ರಿಂದ 7:30ರ ನಡುವೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಘಟನೆ ಬಗ್ಗೆ ತಿಳಿದ ನಂತರ, ಆಕೆಯ ಕುಟುಂಬ ಸದಸ್ಯರು ಮತ್ತು ಸ್ಥಳೀಯ ನಿವಾಸಿಗಳು ನಟಿಯನ್ನು ವಸೈ-ವಿರಾರ್ ಮುನ್ಸಿಪಲ್ ಆಸ್ಪತ್ರೆಗೆ ಕರೆದೊಯ್ದರು. ಆದ್ರೆ, ವೈದ್ಯರು ನಟಿ ಅದಾಗಲೇ ಮೃತಪಟ್ಟಿರುವುದಾಗಿ ತಿಳಿಸಿದರು.


ಸಂಚಿತಾ ಅವರ ತಂದೆ ಮಚ್ಛಿಂದ್ರ ಉಗಾಲೆ ಅವರು ಸಲ್ಲಿಸಿದ ದೂರಿನ ಆಧಾರದ ಮೇಲೆ, ಆಚೋಲೆ ಪೊಲೀಸರು ಇಂದು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ () ಸೆಕ್ಷನ್ 194ರ ಅಡಿಯಲ್ಲಿ ಅಸಹಜ ಸಾವು ವರದಿ () ದಾಖಲಿಸಿಕೊಂಡಿದ್ದಾರೆ. ತನಿಖೆ ನಡೆಯುತ್ತಿದೆ ಮತ್ತು ಎಲ್ಲಾ ಆಯಾಮಗಳಿಂದಲೂ ಪರಿಶೀಲಿಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

# ಬೆಂಗಳೂರು: ಬೆಟ್ಟಿಂಗ್ ಚಟಕ್ಕೆ ಬಿದ್ದ ಪತಿಯಿಂದ ಹೋಂ ಗಾರ್ಡ್ ಪತ್ನಿಯ ಭೀಕರ ಹತ್ಯೆ; ಮಕ್ಕಳೆದುರೇ ಕೃತ್ಯ

ಬೆಂಗಳೂರು: ಆನ್‌ಲೈನ್ ಬೆಟ್ಟಿಂಗ್ ಚಟಕ್ಕೆ ಬಿದ್ದ ಪತಿಯೊಬ್ಬ ತನ್ನ ಪತ್ನಿಯನ್ನು ಮಕ್ಕಳ ಎದುರೇ ಚಾಕುವಿನಿಂದ ಇರಿದು ಬರ್ಬರವಾಗಿ ಹತ್ಯೆಗೈದ ಆಘಾತಕಾರಿ ಘಟನೆ ಮಹಾದೇವಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಮಹಾದೇವಪುರ ಪೊಲೀಸ್ ಠಾಣೆಯಲ್ಲಿ ಹೋಂ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದ ಮಂಜುಳಾ (32) ಹತ್ಯೆಯಾದ ದುರ್ದೈವಿ. ಪತ್ನಿಯನ್ನು ಹತ್ಯೆಗೈದ ಆರೋಪಿ ಪ್ರದೀಪ್‌ನನ್ನು ಮಹಾದೇವಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆನ್‌ಲೈನ್ ಬೆಟ್ಟಿಂಗ್ ಗೀಳು: 15 ವರ್ಷಗಳ ಹಿಂದೆ ಪ್ರದೀಪ್ ಮತ್ತು ಮಂಜುಳಾ ಮದುವೆಯಾಗಿತ್ತು. ಆದರೆ ಪ್ರದೀಪ್ ಇತ್ತೀಚೆಗೆ ಆನ್‌ಲೈನ್ ಆ್ಯಪ್‌ಗಳಲ್ಲಿ ಬೆಟ್ಟಿಂಗ್ ಗೀಳಿಗೆ ಸಿಲುಕಿದ್ದ ಎನ್ನಲಾಗಿದೆ. ಅದೇ ಕಾರಣಕ್ಕೆ ಕುಟುಂಬ ಆರ್ಥಿಕ ಸಂಕಷ್ಟಕ್ಕೀಡಾಗಿತ್ತು. ಸಾಲದ್ದಕ್ಕೆ ಪತ್ನಿ ಮೇಲೆಯೂ ಪ್ರದೀಪ್ ಸದಾ ಅನುಮಾನಪಡುತ್ತಿದ್ದ ಎನ್ನಲಾಗಿದೆ.



ಕ್ಷಮೆ ಕೇಳುವುದಾಗಿ ನಟಿಸಿ ಪತ್ನಿಯ ಹತ್ಯೆ: ಪತಿಯ ಮಾನಸಿಕ ಹಾಗೂ ದೈಹಿಕ ಹಿಂಸೆ ತಾಳಲಾರದೆ ಮಂಜುಳಾ ತನ್ನ ಮಕ್ಕಳೊಂದಿಗೆ ಪ್ರತ್ಯೇಕವಾಗಿ ಪುಷ್ಪಾಂಜಲಿ ಥಿಯೇಟರ್ ಬಳಿಯ ಮನೆಯಲ್ಲಿ ವಾಸವಿದ್ದರು. ಭಾನುವಾರ ರಾತ್ರಿ 9 ಗಂಟೆ ಸುಮಾರಿಗೆ ಮಂಜುಳಾ ಇದ್ದ ಮನೆಗೆ ಬಂದಿದ್ದ ಪ್ರದೀಪ್, ತಾನು ಮಾಡಿದ ತಪ್ಪಿಗೆ ಕ್ಷಮೆ ಕೇಳುವವನಂತೆ ನಟಿಸಿದ್ದಾನೆ. ಕೊನೆಯದಾಗಿ ಕಾಲು ಹಿಡಿಯುತ್ತೇನೆ, ತಪ್ಪಾಯಿತು ಮನೆಗೆ ಬಾ ಎಂದು ಕಾಲಿಗೆ ಬಿದ್ದವನೇ, ಜರ್ಕಿನ್ ಒಳಗಡೆ ಬಚ್ಚಿಟ್ಟುಕೊಂಡು ತಂದಿದ್ದ ಚಾಕುವಿನಿಂದ ಮಂಜುಳಾ ಅವರ ಮೇಲೆ ಮುಗಿಬಿದ್ದಿದ್ದಾನೆ. ಇಬ್ಬರು ಮಕ್ಕಳ ಎದುರೇ ಮಂಜುಳಾ ಅವರಿಗೆ 10ಕ್ಕೂ ಅಧಿಕ ಬಾರಿ ಚಾಕುವಿನಿಂದ ಇರಿದು ಬರ್ಬರವಾಗಿ ಹತ್ಯೆ ಮಾಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಹತ್ಯೆಗೂ ಮುನ್ನ ವಿಡಿಯೋ ಮಾಡಿದ ಆರೋಪಿ: ಹತ್ಯೆಗೂ ಮುನ್ನ ಆರೋಪಿ ಪ್ರದೀಪ್ ವಿಡಿಯೋ ಒಂದನ್ನು ಮಾಡಿಕೊಂಡಿದ್ದ ಎನ್ನಲಾಗಿದೆ. ಬೆಟ್ಟಿಂಗ್ ಚಟದಿಂದ ನನ್ನ ಹೆಂಡತಿ, ಮಕ್ಕಳು ಬೀದಿಗೆ ಬಂದರು. ಅತ್ತೆ ಹಾಗೂ ನಾದಿನಿಯಿಂದ ನನ್ನ ಪತ್ನಿ ಹಾಳಾದಳು. ನಾನೂ ಸಾಯುತ್ತೇನೆ, ನನ್ನ ಹೆಂಡತಿಯೂ ಸಾಯುತ್ತಾಳೆ ಎಂದು ವಿಡಿಯೋದಲ್ಲಿ ಹೇಳಿಕೊಂಡಿದ್ದ ಎನ್ನಲಾಗಿದೆ.

ಆರೋಪಿ ಆತ್ಮಹತ್ಯೆ ಯತ್ನ: ಪತ್ನಿಯನ್ನು ಹತ್ಯೆ ಮಾಡಿದ ಬಳಿಕ ಪ್ರದೀಪ್ ತಾನು ಕೂಡ ಚಾಕುವಿನಿಂದ ಕೈ ಕೊಯ್ದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾನೆ. ಘಟನಾ ಸ್ಥಳಕ್ಕೆ ಆಗಮಿಸಿದ ಮಹಾದೇವಪುರ ಪೊಲೀಸರು, ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿದ್ದಾರೆ.

ಆರೋಪಿ ಪ್ರದೀಪ್‌ನನ್ನು ಬಂಧಿಸಿ, ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿರುವುದಾಗಿ ಪೊಲೀಸರು ಮಾಹಿತಿ ನೀಡಿದ್ದಾರೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR